ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 5 ಫೆಬ್ರವರಿ 1, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಮುಂದಿನ ಸಂಚಿಕೆಯಲ್ಲಿ

ಕೇಂದ್ರ - ರಾಜ್ಯ ಸಂಬಂಧದ ಬಗ್ಗೆ ಮಾತೆತ್ತದ ರಾಜ್ಯಪಾಲರು

ವಿಧಾನ ಮಂಡಲದ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಹುರುಳಿಲ್ಲ -ಎನ್ಕೆ

ಕರ್ನಾಟಕ ರಾಜ್ಯದ ವಿಧಾನ ಸಭೆ-ವಿಧಾನ ಪರಿಷತ್ತಿನ ಜಂಟೀ ಅಧಿವೇಶನವನ್ನುದ್ದೇಶಿಸಿ ಜನವರಿ 29 ರಂದು ರಾಜ್ಯಪಾಲ ಬ್ಯಾನರ್ಜಿಯವರು ಭಾಷಣ ಮಾಡಿದ್ದಾರೆ. ಇದರಲ್ಲಿ ಕರ್ನಾಟಕ ಜನಕೋಟಿಯ ಬೇಡಿಕೆಗಳಾದ ವಿಜಯನಗರ ಉಕ್ಕಿನ ಕಾರ್ಖಾನೆ, ಥರ್ಮಲ್ ಪ್ಲಾಂಟ್‌ಗಳು ಮಂಗಳೂರಿನ ಪೆಟ್ರೊ ಕೆಮಿಕಲ್ ಮಂಗಳೂರು-ಮುಂಬಯಿ ಹಾಗೆಯೇ ರಾಜ್ಯದಲ್ಲಿ ಇತರ ರೈಲ್ವೆಗಳು, ರೈಲ್ವೆಗಳ ಪರಿವರ್ತನೆ, ದೊಡ್ಡ ನೀರಾವರಿ ಯೋಜನೆಗಳೆಲ್ಲ ಮೂಲೆಗುಂಪಾಗಿವೆ. ಇವುಗಳ ಸಾಧನೆಗಾಗಿ ರಾಜಕೀಯ ಭಿನ್ನಾಭಿಪ್ರಾಯ ಬಿಟ್ಟು ಜನಸಾಮಾನ್ಯರ ಬೆಂಬಲ ಪಡೆದು ಕೇಂದ್ರದ ವಿರುದ್ಧ ಜನತಾ ಚಳುವಳಿ ನಡೆಸಬೇಕಾದದ್ದು ಅತ್ಯಗತ್ಯ. ಕೇಂದ್ರ-ರಾಜ್ಯಗಳ ಸಂಬಂಧದಲ್ಲಿ ಬದಲಾವಣೆ, ಕೇಂದ್ರದಿಂದ ರಾಜ್ಯಗಳಿಗೆ ಅದರಲ್ಲೂ ಕರ್ನಾಟಕಕ್ಕೆ ಹೆಚ್ಚಿನ ಸಂಪನ್ಮೂಲ ಕೊಡುಗೆ, ಈ ಅಂಶಗಳನ್ನೆಲ್ಲ ರಾಜ್ಯಪಾಲರ ಭಾಷಣ ಒಳಗೊಳ್ಳಬೇಕಾಗಿತ್ತು. ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪಶ್ಚಿಮ ಬಂಗಾಲ, ಕಾಶ್ಮೀರ, ಕೇರಳಗಳನ್ನು ಸಂದರ್ಶಿಸಿದಾಗ, ಯೋಜನಾ ಆಯೋಗವನ್ನಾಗಲೀ, ಸಂಬಂಧಪಟ್ಟ ಮಂತ್ರಿಗಳನ್ನಾಗಲೀ ವಿಚಾರಿಸದೆ, ಸಾವಿರಾರು ಕೋಟಿ ರೂಪಾಯಿ ಹಣ ಸಹಾಯ ಮಾಡುತ್ತೇನೆಂದು ಘೋಷಿಸಿದ ರಾಜೀವ್ ಗಾಂಧಿಯವರನ್ನು ತರಾಟೆಗೆ ತೆಗೆದುಕೊಂಡ ರಾಮಕೃಷ್ಣ ಹೆಗಡೆಯವರು ಆ ಅಂಶವನ್ನು ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸದಿರುವುದು ಎದ್ದು ಕಾಣುವ ಕೊರತೆಯಾಗಿದೆ.

ಕಾರ್ಮಿಕರ ಮತ್ತು ಕನಿಷ್ಟಕೂಲಿಗೆ ಸಂಬಂಧಪಟ್ಟಂತೆ ರಾಜ್ಯಪಾಲರು "ಜೀವನ ನಿರ್ವಹಣಾ ವೆಚ್ಚದಲ್ಲಿ, ಉಂಟಾದ ಹೆಚ್ಚಳವನ್ನು ಗಮನದಲ್ಲಿರಿಸಿಕೊಂಡು ಹಲವಾರು ಉದ್ಯೋಗಗಳಲ್ಲಿ ಕನಿಷ್ಟ ಮಜೂರಿಯನ್ನು ಪರಿಷ್ಕರಿಸಲಾಗಿದೆಂದು" ಹೇಳಿದ್ದಾರೆ. ಆದರೆ ವಾಸ್ತವ ಪರಿಸ್ಥಿತಿ ತದ್ವಿರುದ್ಧವಾಗಿದೆ. ಮಾಲಕರ ಜೊತೆಯಲ್ಲಿನೇರವಾಗಿ ಚರ್ಚಿಸಿ 1 ಸಾವಿರಬೀಡಿಗೆ ತುಟ್ಟಿಭತ್ತೆ ಸೇರಿ ರೂ. 12.20 ಪಡೆಯಲು ಸಾಧ್ಯವಾಗಿದೆ. ಆದರೆ ರಾಜ್ಯ ಸರ್ಕಾರ ನಿರ್ಧರಿಸಿರುವ ಕನಿಷ್ಟ ಕೂಲಿ ತುಟ್ಟಿಭತ್ತೆ ಸೇರಿ ಬರೇ ರೂ. 11.50 ಮಾತ್ರ. ನೆರೆ ರಾಜ್ಯವಾದ ಕೇರಳದಲ್ಲಿ 800 ಬೀಡಿಗೆ ರೂ. 15 ಕನಿಷ್ಟ ಕೂಲಿ ಸಿಗುತ್ತಿದೆ. ತಮಿಳುನಾಡು-ಕೇರಳದಲ್ಲಿ ತೋಟ ಕಾರ್ಮಿಕರಿಗೆ ರೂ. 17/ ಕನಿಷ್ಟ ದಿನಕೂಲಿ ಸಿಗುತ್ತಿರುವಾಗ ಕರ್ನಾಟಕದಲ್ಲಿ ಸರಕಾರ ನಿರ್ಧರಿಸಿದ ಕನಿಷ್ಟಕೂಲಿ ಬರೇ ರೂ. 10.50 ಮಾತ್ರ. ಆದರೆ ಕೆಲಸಗಾರರು ಮಾಲಕರ ಜೊತೆ ಚರ್ಚಿಸಿ ರೂ. 11.50 ಪಡೆದಿದ್ದಾರೆ. ಇದು ರಾಜ್ಯ ಸರಕಾರದ ಕನಿಷ್ಟ ಮಜೂರಿ ಪರಿಷ್ಕರಣ ನೀತಿ. ಹಂಚಿನ ಕಾರ್ಖಾನೆ ಮೊದಲಾದ ಕಾರ್ಮಿಕರಿಗೆ ಇನ್ನೂ ಕನಿಷ್ಟ ಮಜೂರಿ ನಿರ್ಧರಿಸಲ್ಪಟ್ಟಿಲ್ಲ. ಕರ್ನಾಟಕದಲ್ಲಿ 6 ಲಕ್ಷ ಬೀಡಿ ಕಾರ್ಮಿಕರೂ ಎರಡುವರೆ ಲಕ್ಷ ಪ್ಲಾಂಟೇಶನ್ ಕಾರ್ಮಿಕರೂ ಇದ್ದಾರೆ. ಇದರ ಉಲ್ಲೇಖವಿಲ್ಲ.

"ವರ್ಷದಲ್ಲಿ ಒಟ್ಟಾರೆ ಔದ್ಯಮಿಕ ಬಾಂಧವ್ಯಗಳು ಉತ್ತಮವಾಗಿದ್ದುವೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ" ಎಂದು ರಾಜ್ಯಪಾಲರು ಹೇಳಿದ್ದಾರೆ. ಆದರೆ ವಾಸ್ತವ ಪರಿಸ್ಥಿತಿ ತದ್ವಿರುದ್ಧವಾಗಿದೆ. ಬೆಂಗಳೂರಿನಲ್ಲೇ

(8ನೇ ಪುಟ ನೋಡಿ)

ರಾಜೀವ್ ಗಾಂಧಿಯ ಪತ್ರಿಕಾಗೋಷ್ಠಿ

ಪಂಜಾಬಿನಲ್ಲಿ ದಿನನಿತ್ಯ ಹದಗೆಡುತ್ತಿರುವ ಪರಿಸ್ಥಿತಿಯನ್ನೆದುರಿಸಲು ಬರೇ ರಾಜ್ಯ ಮತ್ತು ಕೇಂದ್ರದ ಸರಕಾರಗಳಿಂದ ಮಾತ್ರ ಸಾಧ್ಯವಿಲ್ಲ. ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಛಿದ್ರಕಾರಿಗಳ ವಿರುದ್ಧ ಪಂಜಾಬಿನ ಮತ್ತು ಇಡೀ ದೇಶದ ಜನತೆಯನ್ನು ಸಿದ್ಧಗೊಳಿಸಬೇಕೆಂಬ ಮಹತ್ವದ ಅಂಶವನ್ನು ಪ್ರಧಾನ ಮಂತ್ರಿ ರಾಜೀವಗಾಂಧಿಯವರು ಮರೆತಂತೆ ಕಂಡುಬರುತ್ತದೆಂದು ಮಾರ್ಕ್ಸ್

ಜನಾಭಿಪ್ರಾಯ ಮೂಡಿಸುವುದರಲ್ಲಿ ತನ್ನ ಪಕ್ಷ ಸಂಪೂರ್ಣ ವಿಫಲವಾಗಿದೆಂಬುದನ್ನು ಸಹ ಪ್ರಧಾನ ಮಂತ್ರಿಯವರು ಕಡೆಗಣಿಸುತ್ತಿದ್ದಾರೆ.

ಒಪ್ಪಂದ ಜ್ಯಾರಿಯಾಗದಿರುವುದಕ್ಕೆ ಅಕಾಲಿ ಸರಕಾರವೇ ಸಂಪೂರ್ಣ ಜವಾಬ್ದಾರಿಯೆಂದು ಹೇಳುವುದು ವಸ್ತುಸ್ಥಿತಿಗೆ ವಿರೋಧವಾಗಿ ಮಾತ್ರವಲ್ಲ ನ್ಯಾಯಯುತವೂ ಅಲ್ಲ. ಕೇಂದ್ರ ಸರಕಾರದ ಮೇಲೆಯೂ ಅದರ ಜವಾಬ್ದಾರಿ ಇದೆ. ಕೇಂದ್ರ ಸರಕಾರದ ಮುಖ್ಯಸ್ಥರಾಗಿ, ರಾಜೀವ ಗಾಂಧಿಯ ರಾಷ್ಟ್ರೀಯ ಐಕ್ಯತೆಯಪರವಾಗಿತ್ತೆಂಬು

ವೆಂಕಟೇಶ್ವರನ್ ಬಗ್ಗೆ ಪ್ರಧಾನಿ ದುರ್ವರ್ತನೆ

ವಿದೇಶ ಕಾರ್ಯದರ್ಶಿಯಾಗಿದ್ದ ವೆಂಕಟೇಶ್ವರನ್ ಅವರು ರಾಜೀನಾಮೆ ಕೊಡುವಂತೆ ಪ್ರಧಾನ ಮಂತ್ರಿಯವರು ಮಾಡಿದ ಕ್ರಮವನ್ನು ಪಿ. ಬಿ. ಟೀಕಿಸಿದೆ. ಪತ್ರಿಕಾ ಸಮ್ಮೇಳನದಲ್ಲಿ ಅವರು ವ್ಯಕ್ತ ಮಾಡಿದ ಅಭಿಪ್ರಾಯವನ್ನು ಯಾವುದೇ ಸ್ವಾಭಿಮಾನಿ ಅಧಿಕಾರಿ ಸಹಿಸಲುಸಾಧ್ಯವಿಲ್ಲ. ವೆಂಕಟೇಶ್ವರನ್ ಅವರಂತೆ ಯಾವೊಬ್ಬ ಸರಕಾರಿ ನೌಕರನನ್ನು ಸಾರ್ವಜನಿಕವಾಗಿ ಅವಹೇಳನಗೊಳಿಸಿದರೆ ನಮ್ಮ ದೇಶದಲ್ಲಿ ನಿಷ್ಪಾಪಂತ ನಾಗರೀಕರು ಅದನ್ನು ಒಪ್ಪಲಾರರು. ತಟಸ್ಥ ನೀತಿಯನ್ನು ಪ್ರತಿಪಾದಿಸುತ್ತಿದ್ದ ವಿದೇಶಿ ಕಾರ್ಯದರ್ಶಿಗೆ ಈ ರೀತಿಯ ವರ್ತನೆ ಮಾಡಿ ತೋರಿಸಲಾಗಿದೆ.

ಜಿ. ಪಾರ್ಥಸಾರಥಿಯವರ ರಾಜೀನಾಮೆ, ಧೋರಣೆ ನಿರ್ಣಾಯಕ ಸಮಿತಿಯ ವಿಸರ್ಜನೆ, ವಿದೇಶಾಂಗ ಮಂತ್ರಿ ಶಾಖೆಯಿಂದ ರಾಜ್ಯ ಮಂತ್ರಿ ಕೆ. ಆರ್. ನಾರಾಯಣ ಅವರ ಬದ್ಲಿ-ಇವುಗಳನ್ನೆಲ್ಲ ನೋಡುವಾಗ ನಿರ್ಣಾಯಕ ಬದಲಾವಣೆಗಳಾಗಬಹುದೆಂಬ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆಂದು ಪಿ. ಬಿ. ಅಭಿಪ್ರಾಯ ವ್ಯಕ್ತ ಮಾಡಿದೆ.

ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಜನವರಿ 20 ರ ಪತ್ರಿಕಾ ಗೋಷ್ಠಿಯಲ್ಲಿ ರಾಜೀವಗಾಂಧಿಯವರ ಹೇಳಿಕೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದೆ. ರಾಜೀವ್ - ಲೊಂಗೊವಾಲ್ ಒಪ್ಪಂದವನ್ನು ಜಾರಿ ಮಾಡದಿರುವುದರಿಂದಾಗಿ ಜನಾಭಿಪ್ರಾಯವನ್ನು ಕ್ರೋಢೀಕರಿಸಲಿಕ್ಕೆ ಮುಖ್ಯಮಂತ್ರಿ ಬರ್ನಾಲಾ ಅವರಿಗೆ ಅಡ್ಡಿಯಾಗುತ್ತಿದೆ. ಛಿದ್ರಕಾರಿ ಶಕ್ತಿಗಳ ವಿರುದ್ಧ ವಹ ಯಾವುದೇ ಕ್ರಮ ತೆಗೆದುಕೊಳ್ಳುವ ಮುಂಚೆ ಅಥವಾ ಹೇಳಿಕೆ ಕೊಡುವ ಮೊದಲು ಅವುಗಳಿಂದಾಗಿ ರಾಜ್ಯ ಮತ್ತು ಕೇಂದ್ರ ಸರಕಾರಗಳ ಮಧ್ಯೆ ಘರ್ಷಣೆ ಉಂಟಾಗದಂತೆ [illegible] ಕೊಳ್ಳುವುದು ಅವಶ್ಯಕ. ಪ್ರಧಾನ ಮಂತ್ರಿಯವರ ಹೇಳಿಕೆಗೆ ಮುಖ್ಯಮಂತ್ರಿ ಬರ್ನಾಲಾ ಅವರ ಪ್ರತಿಕ್ರಿಯೆ ಸಮಾಧಾನಕರವಾಗಿ [illegible] ದನ್ನು ಇಲ್ಲಿ ಗಮನಿಸಬೇಕಾಗಿದೆ.

ಬಣ್ಣ ಬದಲಾಯಿಸಿಕೊಂಡ ಭಾರತೀಯ ಜನತಾಪಕ್ಷ

ಜನಸಂಘವಾಗಿ ಜನತಾ ಪಕ್ಷದಲ್ಲಿ ಸೇರಿ ತನ್ನ ಕೋಮುವಾದವನ್ನು ಬಿಡೆನೆಂಬ ಛಲ ಸಾಧಿಸಿ ಜನತಾ ಪಕ್ಷವನ್ನು ಒಡೆದ, ನಂತರ ಭಾರತೀಯ ಜನತಾ ಪಕ್ಷ ಎಂಬ ಮುಖವಾಡವನ್ನು ತಳೆದ, ಈ ಪಕ್ಷ ಮೆತ್ತಿಕೊಂಡ ಬಣ್ಣವನ್ನು ಅಳಿಸಿ ಹಾಕಿ ನಿಜ ರೂಪದಲ್ಲಿ ನಿಂತ ಬಗೆಯನ್ನು ವಿವರಿಸುತ್ತಾರೆ ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೊ ಸದಸ್ಯ ಕಾಂ. ಸುರ್‌ಜೀತ್

ಹಿಂದೂ ಜಾತೀಯ ಶಕ್ತಿಯೇ ತನ್ನ ಪಕ್ಷದ ಮೂಲಧಾತ. ಆರ್. ಎಸ್. ಎಸ್. ತನ್ನ ಸಂಘಟನೆಯ ಬೆನ್ನೆಲುಬೆಂದು ತಿಳಿದುಕೊಂಡಿದ್ದ ಭಾರತೀಯ ಜನತಾ ಪಕ್ಷ (ಬಿ. ಜೆ. ಪಿ.) ದ ಮುಖಂಡರಿಗೆ ಜಗತ್ತಿನ ಹಾಗೂ ದೇಶದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವುದಾಗಲೀ ಜನರನ್ನು ಆಕರ್ಷಿಸುವಂಥ ಧೋರಣೆ ನಿರ್ಧರಿಸುವುದಾಗಲೀ ಸಾಧ್ಯವಾಗುತ್ತಿಲ್ಲ. ಕಾಂಗ್ರೆಸ್‌ಗೆ ತಾನು ಪರ್ಯಾಯ ಪಕ್ಷವಾಗಿ ಬೆಳೆದು ಬರುತ್ತೇನೆಂ[illegible] ಕನಸು ಕಾಣುತ್ತಾ ಬಂದಿತ್ತು. ಜೆ. ಪಿ. 1979 ರಲ್ಲಿ ಜನತಾ [illegible]ದಿಂದ ಸಿಡಿದು ಹೊರಗೆ ಬಂದ ನಂತರ ಹಳೇ ಜನಸಂಘ ಹೊಸ ಭಾರತೀಯ ಜನತಾ ಪಕ್ಷವಾಗಿ ಪರಿವರ್ತನೆಗೊಂಡು "ಗಾಂಧೀಯ ಸಮತಾವಾದ" ತನ್ನ ಗುರಿಯೆಂದು ಘೋಷಿಸಿದರೂ ಕೂಡ, ಹಿಂದೂ ಜಾತೀವಾದಿಗಳನ್ನು ಆಕರ್ಷಿಸಿ ಬಲಿಷ್ಟವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ದಿ. ಇಂದಿರಾಗಾಂಧಿ, ಈಗ ರಾಜೀವ್‌ಗಾಂಧಿಯವರು ಜಾತೀಯವಾದಿಗಳ ಕುರಿತು ಒಪ್ಪಂದದ ನಿಲುಮೆ ತಾಳಿ, ಹೆಚ್ಚೆಚ್ಚಾಗಿ ಅವರ ಬೆಂಬಲ ಪಡೆಯುವುದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗುತ್ತಿರುವುದರಿಂದ ಬಿ. ಜೆ. ಪಿ. ಬಲ ಕುಗ್ಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಛಿದ್ರಕಾರಿ, ಪ್ರತ್ಯೇಕತಾವಾದಿ ಮತ್ತು ಜಾತಿವಾದಿ ಶಕ್ತಿಗಳು ಕ್ರಿಯಾ ಶೀಲವಾಗಿ ಬೆಳೆಯುತ್ತಿವೆ. ಹಿಂದೂ, ಮುಸ್ಲಿಂ,

(8ನೇ ಪುಟ ನೋಡಿ)

ಲೋಹಿಯಾವಾದ.... ಕೆಲವು ಟಿಪ್ಪಣಿಗಳು - ಹಲವು ಗೊಂದಲಗಳು

ಲೋಹಿಯಾವಾದ ಒಂದು ಕಾಲಾವಧಿಯಲ್ಲಿ ಕರ್ನಾಟಕದ ಎಡ ರಾಜಕಾರಣದಲ್ಲೂ, ನವ್ಯ ಪಂಥದ ಹಲವು ಸಾಹಿತಿಗಳ ಮೂಲಕ ಸಾಂಸ್ಕೃತಿಕ ರಂಗದಲ್ಲೂ ಒಂದು ಪ್ರಮುಖ ಧಾರೆಯಾಗಿದ್ದು ಈಗ ದುರ್ಬಲವಾಗಿದ್ದರೂ ಸಾಕಷ್ಟು ಸೈದ್ಧಾಂತಿಕ ಪ್ರಭಾವ ಉಳಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಲೋಹಿಯಾವಾದವನ್ನು "ಒಂದು ಯೋಜನಾಬದ್ಧ, ಚೌಕಟ್ಟಿನಲ್ಲಿ" "ವಸ್ತುನಿಷ್ಠತೆಯಿಂದ" ಪುನರ್ವಿಮರ್ಶಿಸುವ ರಾಜಾರಾಮ್ ತೋಳ್ಪಾಡಿಯವರ ಪ್ರಯತ್ನ ಕುತೂಹಲಕಾರಿಯಾಗಿದ್ದು.

ಅವರು "ಪರಿಚಯಾತ್ಮಕ" ವೆಂದು ಹೇಳಿಕೊಂಡರೂ ಲೋಹಿಯಾವಾದವನ್ನು ಸಾಕಷ್ಟು ವಿಮರ್ಶಾತ್ಮಕವಾಗಿಯೇ ವ್ಯಾಖ್ಯಾನಿಸಿದ್ದಾರೆ.

ಲೋಹಿಯಾವಾದದ ಒಟ್ಟಾರೆ ಸೋಲು ಗೆಲುವಿನ ವಿಶ್ಲೇಷಣೆಯನ್ನು ತೋಳ್ಪಾಡಿಯವರು ಈ ಕೆಳಗಿನ ಮಾತುಗಳಲ್ಲಿ ಹೇಳುತ್ತಾರೆ.

"ತಮ್ಮ ಆರ್ನಾಲ್ಡ್ ಶೈಲಿಯ ಚಾರಿತ್ರಿಕ ವಿಶ್ಲೇಷಣೆ ಮತ್ತು ತೀಕ್ಷ್ಣ ಸಾಂಸ್ಕೃತಿಕ ಒಳನೋಟಗಳಿಂದ ಮೇಲು ನೋಟಕ್ಕೆ ತುಂಬ ಆಕರ್ಷಕವಾಗಿ ಕಂಡು ಬರುವ ಲೋಹಿಯಾ ವಿಚಾರಗಳನ್ನು ಹೆಚ್ಚು ವ್ಯವಸ್ಥಿತವಾದ ಅಕಾಡೆಮಿಕ್ ವಿಶ್ಲೇಷಣೆಗೆ ಒಳಪಡಿಸಿದಾಗ ತಮ್ಮ ಆಂತರ್ಯದ ತಾರ್ಕಿಕ Inconsistency ಯಿಂದಾಗಿ ಬೇರೆ ಬೇರೆ ಬೌದ್ಧಿಕ ಹಿನ್ನೆಲೆಗಳಿಂದ ಅನೇಕ ವಿಚಾರಗಳ ಕೌತುಕಕಾರಿ ಮಿಶ್ರಣದಂತೆ ಕಂಡು ಬರುತ್ತದೆ......ತನ್ನ ವೈಚಾರಿಕ ವ್ಯವಹಾರದಲ್ಲಿ ಒಂದು ಚಿಂತನ ಪದ್ಧತಿಯಿಂದ ಇನ್ನೊಂದು ಚಿಂತನ ಪದ್ಧತಿಗೆ ಸರಾಗವಾಗಿ ಕುಪ್ಪಳಿಸುವ ಲೋಹಿಯಾ ತತ್ವ ಚಿಂತನೆಯ ಈ ಆಂತರಿಕ ಸಡಿಲತೆಯೇ ಅದು ರಾಜಕೀಯವಾಗಿ ವಿಪರ್ಯಾಸಗಳ ಕಥೆಯಾಗಿ ಕೊನೆಗೊಂಡಿದ್ದಕ್ಕೆ ಕಾರಣವಿರಬಹುದು. ಚಿಂತನೆಯಲ್ಲಿ ಭಾವುಕತೆ ಮತ್ತು ರಾಜಕಾರಣದಲ್ಲಿ ಹಠಮಾರಿತನ ಲೋಹಿಯಾವಾದದಲ್ಲಿ ಪರಸ್ಪರ ಸಂಬಂಧಿಯಾಗಿ ಸ್ಥಾನ ಪಡೆದುಕೊಂಡಿದೆ .... ರಾಜಕೀಯದಲ್ಲಿ ಅವರ ಹಠಮಾರಿತನ ಅವರನ್ನು ಬೂರ್ಜ್ವಾ ರಾಜಕಾರಣದಲ್ಲಿ ಹೋರಾಟದ ಹೊಸ ಪರಂಪರೆಯ ವಕ್ತಾರರನ್ನಾಗಿಸಿತು ಎನ್ನುವುದು ಹೌದಾದರೂ ಒಟ್ಟು ಪರಿಣಾಮದ ರಾಜಕಾರಣದಲ್ಲಿ ಆ ತರಹದ ಹೋರಾಟದ ನಿಷ್ಪ್ರಯೋಜಕತೆಯನ್ನು ಅದು ಸಾಬೀತು ಪಡಿಸಿತು" (ಪುಟ 23–24)

ಲೋಹಿಯಾವಾದವನ್ನು ಆಧುನಿಕ ಭಾರತದ ಸಂದರ್ಭದಲ್ಲಿ ಅರ್ಥೈಸಿಕೊಳ್ಳುವ ಪ್ರಯತ್ನ ಮಾಡುವಾಗ, ಎರಡು ಅಂಶಗಳಿಗೆ ಪುಸ್ತಕದುದ್ದಕ್ಕೂ ಒತ್ತು ಬಿದ್ದಿದೆ.

ಒಂದನೆಯದಾಗಿ ಲೋಹಿಯಾವಾದದ ಗಾಂಧೀವಾದಿ ಪ್ರೇರಣೆಗಳು

ಎರಡನೆಯದಾಗಿ ಇಂಡಿಯಾದ ಸಮಾಜವಾದಿ ಹೋರಾಟದಲ್ಲಿ ಮಾರ್ಕ್ಸ್‌ವಾದಕ್ಕೆ ಬದಲಿಯಾದ ಸೈದ್ಧಾಂತಿಕ ಚೌಕಟ್ಟು ನೀಡುವ ಲೋಹಿಯಾವಾದದ ಪ್ರಯತ್ನ.

ತಮ್ಮ ಕಿರು ಹೊತ್ತಿಗೆಯಲ್ಲಿ ತೋಳ್ಪಾಡಿಯವರು ಲೋಹಿಯಾವಾದದ ಬೆಳವಣಿಗೆಯನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಘಟ್ಟದಿಂದ ಈಗಿನವರೆಗೆ ಅವಲೋಕಿಸಿ ಹೀಗೆ ಅರ್ಥೈಸುತ್ತಾರೆ.

"ಸ್ವಾತಂತ್ರ್ಯ ಪೂರ್ವ ರಾಜಕೀಯ ಮತ್ತು ಸಾಮಾಜಿಕ ಸನ್ನಿವೇಶದಲ್ಲಿ ಲೋಹಿಯಾರ ಸಮಾಜವಾದದ ಪ್ರಮುಖ ಸಮಸ್ಯೆ ಗಾಂಧೀವಾದ ಮತ್ತು ಮಾರ್ಕ್ಸ್‌ವಾದದ ನಡುವೆ ಸಮನ್ವಯ ಸಾಧಿಸಿಕೊಳ್ಳುವುದಾದರೆ ಸ್ವಾತಂತ್ರ್ಯೋತ್ತರ ಲೋಹಿಯಾ ಸಮಾಜವಾದಕ್ಕೆ ಮಾರ್ಕ್ಸ್‌ವಾದವನ್ನು ಅರ್ಥಪೂರ್ಣ ನೆಲೆಗಳಲ್ಲಿ ತಿರಸ್ಕರಿಸುವುದು ಮತ್ತು ಸಮಾಜವಾದವನ್ನು ಗಾಂಧೀ ಆಶಯಗಳಲ್ಲಿ ಪುನರ್ವ್ಯಾಖ್ಯಾನಿಸುವುದು ಆಗಿತ್ತು." (ಪುಟ16

ಲೋಹಿಯವಾದದ ಬಗ್ಗೆ ರಾಜಾರಾಮ್ ತೋಳ್ಪಾಡಿಯವರ ಪುಸ್ತಕದ ಒಂದು ವಿಮರ್ಶೆ

ಮಾರ್ಕ್ಸ್‌ವಾದವನ್ನು "ಅರ್ಥಪೂರ್ಣ ನೆಲೆಗಳಲ್ಲಿ" ತಿರಸ್ಕರಿಸುವುದು ಯಾಕೆ ಅಗತ್ಯವಾಯಿತು ಎಂಬುದರ ಬಗ್ಗೆ ವಿಶ್ಲೇಷಿಸುತ್ತಾ, ಲೋಹಿಯಾರ ಮಾರ್ಕ್ಸ್‌ವಾದದ ಬಗೆಗಿನ ಟೀಕೆಗಳನ್ನು ಸಂಗ್ರಹಿಸಿ ಹೇಳುವುದರ ಜತೆಗೆ ತೋಳ್ಪಾಡಿಯವರು "ಲೋಹಿಯಾವಾದ ಮಾರ್ಕ್ಸ್‌ವಾದವನ್ನು ತಿರಸ್ಕರಿಸಿದೆ ಎನ್ನುವುದಕ್ಕಿಂತಲೂ ಅದು ಮಾರ್ಕ್ಸ್‌ವಾದದ ಯಾಂತ್ರಿಕ ಮತ್ತು ಆಧಿಪತ್ಯವಾದಿ ಪ್ರವೃತ್ತಿಗಳ ವಿರುದ್ಧ ಒಂದು ಅಸ್ತಿತ್ವವಾದಿ ಪ್ರತಿಕ್ರಿಯೆಯಾಗಿತ್ತು." ಎಂಬ ತೀರ್ಮಾನಕ್ಕೆ ಬರುತ್ತಾರೆ. (ಪುಟ 24–ಒತ್ತು ನಮ್ಮದು]

ತೋಳ್ಪಾಡಿಯವರು ತಮ್ಮ ಪ್ರಬಂಧದುದ್ದಕ್ಕೂ ಹೊರಗೆ ನಿಂತು ಲೋಹಿಯಾವಾದವನ್ನು ಅಳೆಯುವ ಪ್ರಯತ್ನ ಮಾಡಿದ್ದಾರೆ, ಅಥವಾ ಹಾಗೆ ತೋರಿಸಿಕೊಂಡಿದ್ದಾರೆ. ಲೋಹಿಯಾವಾದವನ್ನು (ಅದನ್ನು ಒಂದು ವಾದವೆಂದು ಕರೆಯಬಹುದೇ ಎನ್ನುವುದರ ಬಗೆಗೆ ಅವರಿಗೆ ಅನುಮಾನವಿದೆ !] ವೈಭವೀಕರಿಸದೆ ಅದರ ದೌರ್ಬಲ್ಯಗಳನ್ನು ಎತ್ತಿತೋರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದರೂ, ಒಟ್ಟಾರೆಯಾಗಿ ತೋಳ್ಪಾಡಿಯವರಿಗೆ ಲೋಹಿಯಾವಾದದ ಬಗ್ಗೆ ಅನುಕಂಪವಿದೆ ಎಂಬುದು ಸ್ಪಷ್ಟ. ಆದರಿಂದಾಗಿ ಹಲವು ಕಡೆ ಅವರೇ ಎತ್ತಿತೋರಿಸುವ ದೋಷಗಳಿಗೆ "ಸೂಕ್ತ" ಕಾರಣಗಳ ಜತೆ Rationalise ಮಾಡುವ ರಿಗೆ ಹೋಗಿದ್ದಾರೆ. "ಲೋಹಿಯಾ ನಂತರದ" ಲೋಹಿಯಾವಾದದ Stagnation ಬಗ್ಗೆ ಅವರಿಗೆ ಆತಂಕವಿದೆ. ತನ್ನ ದೌರ್ಬಲ್ಯಗಳನ್ನು ಪುನರ್ವಿಮರ್ಶಿಸಿಕೊಂಡು ಪುನಃ ಸಂಗತವೆನ್ನಿಸಬಲ್ಲದು ಎಂಬ ಆಸೆ ಇದೆ.

ಮೊದಲ ನೋಟಕ್ಕೆ ತೋಳ್ಪಾಡಿಯವರ ಲೋಹಿಯಾವಾದದ ಬಗೆಗಿನ ವ್ಯಾಖ್ಯಾನ ಮಾರ್ಕ್ಸ್‌ವಾದಿ ನೆಲೆಯಿಂದ ಮಾಡಿದ ಟೀಕೆಯಂತೆ ಕಂಡರೂ, ಅದು ನಿಜವಾಗಿ ಹಾಗಲ್ಲ. ಮಾರ್ಕ್ಸ್‌ವಾದವನ್ನು ತಿರಸ್ಕರಿಸಿ ಅದಕ್ಕೆ ಬದಲಿಯಾಗಿ ಗಾಂಧೀವಾದದ ಆಧಾರದ ಮೇಲೆ ಭಾರತೀಯ ಸಮಾಜವಾದಕ್ಕೆ "ಸೈದ್ಧಾಂತಿಕ ಚೌಕಟ್ಟು" ಕೊಡಲು ಲೋಹಿಯಾವಾದ 'ಪ್ರಯತ್ನಿಸಿದೆ' ಎಂಬ ತೋಳ್ಪಾಡಿಯವರ 'ವ್ಯಾಖ್ಯಾನ' ಸರಿಯೆಂಬುದು ನಿರ್ವಿವಾದ. ಆದರೆ ಹೀಗೆ ಮಾಡುವಲ್ಲಿ ಅದು ಸಫಲವಾಗಿದೆಯೇ, ಆಗಿದ್ದರೆ ಅದು ದುಡಿಯುವ ವರ್ಗಗಳ ಹಿತ ಸಾಧಿಸುತ್ತಿದೆಯೆ ಎಂಬ "ಪ್ರಶ್ನೆ" ಯನ್ನು ಉತ್ತರಿಸಲು ಅವರು ಪ್ರಯತ್ನಿಸಿಲ್ಲ. ಈ ಪ್ರಶ್ನೆಯನ್ನು ಕೇಳದೆ, ಉತ್ತರಿಸದೆ ಇರುವುದರಿಂದ ಪ್ರಬಂಧ ಲೋಹಿಯಾವಾದದ "ವ್ಯಾಖ್ಯಾನ" ವಾಗಿದೆ ವಿಮರ್ಶೆಯಾಗಿಲ್ಲ. ಹಾಗೆಯೇ ದೇಶದ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಜನಪರವಾದ ಪರಿಹಾರ ಒದಗಿಸುವ ನೀತಿ ರೂಪಿಸುವಲ್ಲಿ ಲೋಹಿಯಾವಾದದ ಸೋಲು ಗೆಲುವುಗಳ ಚರ್ಚೆಯಾಗಿಲ್ಲ. ಆದರೆ ಭಾರತದಲ್ಲಿ ಸಮಾಜವಾದಿ ಹೋರಾಟಕ್ಕೆ ಮಾರ್ಕ್ಸ್‌ವಾದ-ಲೆನಿನ್‌ವಾದ ಸೈದ್ಧಾಂತಿಕ ಚೌಕಟ್ಟು ಒದಗಿಸಲಾರದು ಎಂಬ ಲೋಹಿಯಾವಾದಿ ಪೂರ್ವನಿರ್ಧಾರ ಈ ಗ್ರಂಥದ ಲೇಖಕರಲ್ಲೂ ಸ್ಪಷ್ಟವಾಗಿದೆ. ಆದ್ದರಿಂದಲೇ ಭಾರತದಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸೈದ್ಧಾಂತಿಕ ಚೌಕಟ್ಟಿನಲ್ಲಿ ನಡೆಯುತ್ತಿರುವ ಹೋರಾಟ ದಿನೇ ದಿನೇ ಗಳಿಸುತ್ತಿರುವ ರಾಜಕೀಯ ಪ್ರಭಾವ ಮತ್ತು ಯಶಸ್ಸಿನ ಪ್ರಸ್ತಾಪವಿಲ್ಲ.

ತೋಳ್ಪಾಡಿಯವರು ಲೋಹಿಯಾ ಮಾರ್ಕ್ಸ್‌ವಾದದ ಬಗ್ಗೆ ಮಾಡುವ ಎಲ್ಲಾ ಟೀಕೆಗಳನ್ನು ಪುನರುಚ್ಚರಿಸುವುದಲ್ಲದೆ, ಲೋಹಿಯಾ ನಂತರ ಬಂದಿರುವ ಬೂರ್ಜ್ವಾ (ಇವರಲ್ಲಿ ಕೆಲವರು ತಾವು ಮಾರ್ಕ್ಸ್‌ವಾದಿಗಳು ಎಂದು ಹೇಳಿಕೊಳ್ಳುವವರೂ ಇದ್ದಾರೆ] ಸಿದ್ಧಾಂತಿಗಳ ಮಾರ್ಕ್ಸ್‌ವಾದಿ-ವಿರೋಧಿ ಸಿದ್ಧಾಂತಗಳ ಹೊಸ ಆವೃತ್ತಿಗಳಿಂದ ಈ ವಾದವನ್ನು Up-to-date ಮಾಡಿದ್ದಾರೆ. ಲೋಹಿಯಾ ಮಾಡುವ ಟೀಕೆಗಳೂ, ಮಾರ್ಕ್ಸ್‌ನ ಕಾಲದಿಂದಲೇ ಬೂರ್ಜ್ವಾ ಸಿದ್ಧಾಂತಿಗಳು ಮಾಡಿದ ಟೀಕೆಗಳ ಪುನರಾವರ್ತನೆಯೆಂದು ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. ತೋಳ್ಪಾಡಿಯವರು ಹೊಸದಾಗಿ ಎಬ್ಬಿಸಿರುವ ಮಾರ್ಕ್ಸ್‌ವಾದಿ–ವಿರೋಧಿ ಟೀಕೆಗಳನ್ನು ವಿಮರ್ಶಿಸುವುದು ಇಲ್ಲಿ ಅಗತ್ಯ. ಅವರು ಮುಖ್ಯವಾಗಿ ಎಬ್ಬಿಸಿರುವ ವಿಷಯ– ಮಾರ್ಕ್ಸ್‌ವಾದ "ಯಾಂತ್ರಿಕ ಮತ್ತು ಆಧಿಪತ್ಯವಾದಿ"ಗಳಿಗೆ ಪ್ರವೃತ್ತಿ ಗುರಿಯಾಗಿದ್ದು ಇತ್ತೀಚೆಗಷ್ಟೇ ಬದಲಾಗುತ್ತ ಹೊಸ ಒಲವುಗಳನ್ನು ವ್ಯಕ್ತಪಡಿಸಿದೆಯಂತೆ. ಹೀಗೆ "ಬದಲಾಗುತ್ತಿರುವ" ಮಾರ್ಕ್ಸ್‌ವಾದವನ್ನು ಯುರೋಕಮ್ಯುನಿಸಂ, ತೃತೀಯ ಜಗತ್ತಿನ ಮಾರ್ಕ್ಸ್‌ವಾದ, ಫ್ರಾಂಕ್‌ಫರ್ಟ್ ಮಾರ್ಕ್ಸ್‌ವಾದ ಅಸ್ತಿತ್ವವಾದ ಇತ್ಯಾದಿಯಾಗಿ ಅವರು ಪಟ್ಟಿ ಮಾಡಿದ್ದಾರೆ. ಇವೆಲ್ಲಾ "ನವವಾಮ ಪಂಥ" ಎಂಬ ಸಾಮಾನ್ಯ ಹೆಸರಿನಲ್ಲಿ ಕರೆಯಲ್ಪಡುತ್ತಿರುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿರೋಧಿ ಧೋರಣೆಗಳು ಎಂದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು. ಇದು ತೋಳ್ಪಾಡಿಯವರ ಪ್ರಕಾರ ರಿಪೇರಿಯಾದ ಮಾರ್ಕ್ಸ್‌ವಾದ" ವಾದ್ದರಿಂದ ಮತ್ತು ಇವು "ಹಳೆ" ಮಾರ್ಕ್ಸ್‌ವಾದದ ಬಗ್ಗೆ ಲೋಹಿಯಾರ ಟೀಕೆಗಳನ್ನು ಒಪ್ಪಿಕೊಂಡು ಒಳಗೊಂಡಿರುವುದರಿಂದ ಮಾರ್ಕ್ಸ್‌ವಾದದ ಬಗ್ಗೆ ಲೋಹಿಯಾರ ಟೀಕೆ ಸರಿಯಾದದ್ದು ಎಂಬುದು ತೋಳ್ಪಾಡಿಯವರ ತರ್ಕದಿಂದ ಪರೋಕ್ಷವಾಗಿ ಹೊರಡುವ ತೀರ್ಮಾನ. ತೋಳ್ಪಾಡಿಯವರು ಹೇಳುತ್ತಿರುವ ಹೊಸ "ಪ್ರಜ್ಞಾವಂತ ಮಾರ್ಕ್ಸ್‌ವಾದ" ಯಾವ ರೀತಿಯದು ಎಂದು ತಿಳಿದಿದ್ದೀರಿ ?

ಲೋಹಿಯಾವಾದದ ಸಮರ್ಥನೆಗೆ ತೋಳ್ಪಾಡಿಯವರು ಸುತ್ತು ಬಳಸಿ ಮಾಡುವ ಸರ್ಕಸ್ಸು ನಿಜವಾಗಿಯೂ ನಮಗೆ ಮುಜುಗರ ತರಿಸುತ್ತಿದೆ !

ಈ ಸರ್ಕಸ್ಸುಗಳನ್ನು ಬದಿಗಿಟ್ಟು ತೋಳ್ಪಾಡಿಯವರ ಈ ಪ್ರಬಂಧದ ಒಟ್ಟಾರೆ ಆಶಯವೇನು ? ಲೋಹಿಯಾವಾದವನ್ನು ಈ ರೀತಿ ಪರೋಕ್ಷವಾಗಿ ಎತ್ತಿಹಿಡಿಯುವ ಅಗತ್ಯವೇನು ?

ಗಾಂಧೀವಾದ ಭಾರತದ ಬೂರ್ಜ್ವಾ ವರ್ಗ ಅಂಗೀಕರಿಸಿರುವ ರಾಜಕೀಯ ಆರ್ಥಿಕ ಸಿದ್ಧಾಂತ (ಅ.12 ಐಕ್ಯರಂಗ ನೋಡಿ) ಇಂತಹ ಗಾಂಧಿವಾದೀ ಆಶಯಗಳಲ್ಲಿ ಸಮಾಜವಾದಿ ಸೈದ್ಧಾಂತಿಕ ಚೌಕಟ್ಟು ನಿರೂಪಿಸಲು ಪ್ರಯತ್ನಿಸುವುದು ಎಂದರೆ ಭಾರತದ ಬೂರ್ಜ್ವಾ–ಭೂಮಾಲಕ ಆಳ್ವಿಕೆಯ ಚೌಕಟ್ಟಿಗೇ, ಸಮಾಜವಾದಿ ಚಳುವಳಿಯನ್ನು ಸೀಮಿತಗೊಳಿಸುವುದು ಎಂದರ್ಥ. ಇಂತಹ ಪ್ರಯತ್ನದ ಫಲವೇ ಲೋಹಿಯಾವಾದ. ಈ ಪ್ರಯತ್ನ [ಆಳುವ ವರ್ಗದ ದೃಷ್ಟಿಯಿಂದ] ಸಫಲವಾಗಬೇಕಾದರೆ ಪ್ರಬಲ ಪ್ರತಿಸ್ಪರ್ಧಿಯಾದ ಮಾರ್ಕ್ಸ್‌ವಾದ – ಲೆನಿನ್‌ವಾದವನ್ನು ತಿರಸ್ಕರಿಸುವುದು, ಅದರ ವಿರುದ್ಧ ಹೋರಾಡುವುದು ಅತ್ಯವಶ್ಯ. ವೈಜ್ಞಾನಿಕ ಸಮಾಜವಾದವನ್ನು ಹೀಗಳೆಯುವುದು ತುರ್ತಿನ ಅಗತ್ಯ. ಆದರೆ ಈಗಾಗಲೇ ಜಗತ್ತಿನ ಮೂರನೇ ಒಂದಂಶ ದುಡಿಯುವ ಜನ ಅಂಗೀಕರಿಸಿರುವ ಪ್ರಬಲ ಸಿದ್ಧಾಂತವನ್ನು ಅಲ್ಲಗಳೆಯುವುದು ಅಷ್ಟು ಸುಲಭದ ಕೆಲಸವಲ್ಲ. ಆದ್ದರಿಂದ "ಸಮಾಜವಾದ" "ಮಾರ್ಕ್ಸ್‌ವಾದ"ದ ಹೆಸರಿನಲ್ಲೇ ಬೂರ್ಜ್ವಾ ಸಿದ್ಧಾಂತಗಳನ್ನು ಪ್ರಚಾರ ಪಡಿಸುವುದು ಹಳೆಯ ತಂತ್ರದ ಹೊಸ ಅವತಾರ. ಲೋಹಿಯವಾದ ಸಹ ಇದನ್ನೇ ಮಾಡಿದ್ದು.

ತೋಳ್ಪಾಡಿಯವರ ಈ ಪ್ರಬಂಧದ ವಿಶಿಷ್ಟ ಸಂದರ್ಭದ ಬಗ್ಗೆ ಹೇಳಬೇಕೆಂದರೆ, ಲೋಹಿಯಾವಾದ ರಾಷ್ಟ್ರೀಯ ಹಂತದಲ್ಲಿ ಎಂದೂ ದುಡಿಯುವ ಜನರನ್ನು, ಸಮಾನತೆಯನ್ನು ಬಯಸುವವರನ್ನು ಆಕರ್ಷಿಸುವಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಹತ್ತಿರದ ಸ್ಪರ್ಧಿ ಸಹ ಆಗಿರಲಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ದುಡಿಯುವ ವರ್ಗದ ಚಳುವಳಿಯ ದೌರ್ಬಲ್ಯದಿಂದಾಗಿ ಪ್ರಬಲವೆಂಬಂತೆ ತೋರುತ್ತಿತ್ತು. ಈಗ ಈ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದೆ. ಆದರೂ ಪೆಟ್ಟಿ-ಬೂರ್ಜ್ವಾ ವರ್ಗದೃಷ್ಟಿ ಬಿಡಲಾಗದ ಬುದ್ಧಿಜೀವಿಗಳಿಗೆ ದುಡಿಯುವ ಜನರ ವರ್ಗದೃಷ್ಟಿ ಅಷ್ಟು ಸುಲಭವಾಗಿ ಎಟುಕದು. ಅಲ್ಲದೆ ನವವಾಮ ಪಂಥ ಲೋಹಿಯಾವಾದಕ್ಕಿಂತ ಹೊಸದು, ಹೆಚ್ಚು Sophisticated, Fashionable ಅನ್ನಿಸಿಕೊಳ್ಳಬಲ್ಲದು. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಎದುರಿಸಲು ಹೆಚ್ಚು ಸಮರ್ಥಎಂದು ಅದನ್ನು ಅಪ್ಪಿಕೊಳ್ಳುವವರು ದುಡಿಯುವ ವರ್ಗದ ಹಿತವನ್ನೇನೂ ಸಾಧಿಸಲಾರರು.

ಆದರೆ ತಮಾಷೆಯ ವಿಷಯವೆಂದರೆ, ಲೋಹಿಯಾವಾದವನ್ನು ಪುನರ್‌ಸ್ಥಾಪಿಸುವ ದೀರ್ಘ ಪ್ರಬಂಧ ಬರೆದ ಮೇಲೂ ಅವರಿಗೆ ಈ ಪ್ರಬಂಧದ ಬಗ್ಗೆ "ಅನುಮಾನ"ಗಳು "ಅತೃಪ್ತಿ"ಗಳು ಉಳಿದು ಹೋಗಿವೆ. ಹೀಗೆ ಮಾಡಬಹುದಿತ್ತು ಹಾಗೆ ಮಾಡಬಹುದಿತ್ತು ಎಂದು "ಮೊದಲ ಮಾತು"ಗಳಲ್ಲಿ ದೊಡ್ಡ ಪಟ್ಟಿಯನ್ನೇ ಮುಂದಿಟ್ಟಿದ್ದಾರೆ. ಅಲ್ಲಿ ಅವರು ಮಂಡಿಸಿರುವ ವಿಚಾರಗಳೂ ಮೂಲಭೂತವಾಗಿ ಬೇರೆಯಲ್ಲವಾದರೂ ಒಂದು ರೀತಿಯಲ್ಲಿ ಅವರ ಪ್ರಬಂಧದ

(6ನೇ ಪುಟ ನೋಡಿ)

ಲೋಹಿಯುವಾದವನ್ನು ಮಾರ್ಕ್ಸ್‌ವಾದೀ ದೃಷ್ಠಿಕೋನದಿಂದ ವಿಮರ್ಶಿಸುವುದಕ್ಕೆ ಬದಲಾಗಿ ಪಾಶ್ಚಿಮಾತ್ಯ ದೇಶಗಳ 'ನವಮಾರ್ಕ್ಸ್‌ವಾದಿ' ಎಂಬ ಪುಟ್ಟ ಬಂಡವಾಳಶಾಹಿವಾದಗಳ ದೃಷ್ಠಿಕೋನದಿಂದ ವಿಮರ್ಶಿಸಿದ ಕೃತಿ.

ವಿಜ್ಞಾನ ರಾಜಧಾನಿ ಬೆಂಗಳೂರಲ್ಲಿ

ಭಾರತೀಯ ವಿಜ್ಞಾನ ಕಾಂಗ್ರೆಸ್‌ನ 74ನೇ ಅಧಿವೇಶನ

ಇನ್ನು ಮುಂದೆ 'ಐಕ್ಯರಂಗ'ದಲ್ಲಿ ವಿಜ್ಞಾನ ವಿಷಯಗಳ ಬಗ್ಗೆ ಒಂದು ಹೊಸ ಕಾಲಂ

"ವಿಜ್ಞಾನ ತಂತ್ರಜ್ಞಾನ"

ಪ್ರತಿ ತಿಂಗಳ ಮೊದಲ ವಾರ

"ನಮ್ಮ ಪ್ರಾಕೃತಿಕ ಸಂಪನ್ಮೂಲಗಳನ್ನು ಜಾಗ್ರತೆಯಾಗಿ ಮತ್ತು ವಿವೇಕದಿಂದ ಉಪಯೋಗಿಸಿದರೆ, ಈ ಶತಮಾನದ ಕೊನೆಯ ಗೊತ್ತಿಗೆ ಇರಬಹುದಾದ ಜನ ಸಂಖ್ಯೆಗೆ ಎಲ್ಲಾ ರೀತಿಯ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಸಾಧ್ಯ"

ಇದು ಇತ್ತೀಚೆಗೆ (ಜನವರಿ 3-7) ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಸೇರಿದ್ದ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ 74 ನೇ ಅಧಿವೇಶನ ಹಲವು ವೈಜ್ಞಾನಿಕ ಅಧ್ಯಯನಗಳ ನಂತರ ತೆಗೆದುಕೊಂಡ ತೀರ್ಮಾನ. ಈ ಅಧಿವೇಶನದ ಮುಖ್ಯ ವಿಷಯ "ಸಂಪನ್ಮೂಲಗಳು ಮತ್ತು ಮಾನವನ ಅಭ್ಯುದಯ–ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದ ಸಾಧ್ಯ ಕೊಡುಗೆ" ಆಗಿತ್ತು. ಈ ವಿಷಯದ ಹಲವು ಮುಖಗಳ ಬಗ್ಗೆ ಚರ್ಚಿಸುವ 13 ವಿಶೇಷ ಸಭೆಗಳೂ ಮತ್ತು 2 ದಿನದ ಸಾಮಾನ್ಯ ಅಧಿವೇಶನವೂ ಇತ್ತು. ಇದಲ್ಲದೆ ಹಲವು ವಿಶೇಷ ಭಾಷಣಗಳು, ಸ್ಮಾರಕ ಭಾಷಣಗಳೂ ಅಧಿವೇಶನದಲ್ಲಿದ್ದವು.

ಹಿನ್ನೆಲೆ

ಭಾರತೀಯ ವಿಜ್ಞಾನ ಕಾಂಗ್ರೆಸ್ 1913ರಲ್ಲಿ ಆಗಿನ್ನೂ ಬಾಲ್ಯಾವಸ್ಥೆಯಲ್ಲಿದ್ದ ವಿಜ್ಞಾನದ ಘಟಾನುಘಟಿಗಳಿಂದ ಸ್ಥಾಪಿತವಾಯಿತು. ಸರ್ ಸಿ.ವಿ. ರಾಮನ್, ಅಶುತೋಗ್ ಮುಖರ್ಜಿ ಪಿ.ಸಿ.ರೇ ಮುಂತಾದ ವಿಜ್ಞಾನಿಗಳು ಭಾರತದಲ್ಲಿ ವಿಜ್ಞಾನ ಚಳುವಳಿ ಆರಂಭಿಸುವ ಉದ್ದೇಶದಿಂದ ಇದನ್ನು ಪ್ರಾರಂಭಿಸಿದರು. ಆಗಿನ್ನೂ ಆರಂಭಾವಸ್ಥೆಯಲ್ಲಿದ್ದ ರಾಷ್ಟ್ರೀಯ ಚಳುವಳಿಯ ಪ್ರಭಾವ ಇದರಮೇಲೆ ಆಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ. ಇದರ ಸಂವಿಧಾನದ ಪ್ರಕಾರ ಯಾವುದೇ ವಿಜ್ಞಾನಿ ಅಥವಾ ವಿಜ್ಞಾನದ ಬೆಳವಣಿಗೆಯಲ್ಲಿ ಆಸಕ್ತಿ ಇರುವ ಯಾವುದೇ ಪ್ರಜೆ ಇದರ ಸದಸ್ಯನಾಗಬಹುದು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ವಿಜ್ಞಾನದ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವ ಮೂಲಕ ಯುವಕ ವಿಜ್ಞಾನಿಗಳನ್ನು ಬೆಳಕಿಗೆ ತರುವ ಮೂಲಕ ಇದು ಭಾರಿ ಕೊಡುಗೆ ಸಲ್ಲಿಸಿದೆ. ವಿಜ್ಞಾನ ಕಾಂಗ್ರೆಸ್ ಯಾವತ್ತೂ ವಿಜ್ಞಾನ ಮತ್ತು ಸಮಾಜದ ಸಂಬಂಧಗಳ ಬಗ್ಗೆ ವಿಚಾರ ಮಾಡುತ್ತಿತ್ತು. ತನ್ನ ಎಲ್ಲಾ ವಾರ್ಷಿಕ ಅಧಿವೇಶನಗಳಲ್ಲೂ ದೇಶದ ಸಮಸ್ಯೆಗಳು ಮತ್ತು ವಿಜ್ಞಾನದ ಪಾತ್ರದ ಬಗ್ಗೆ ವಿಚಾರ ನಡೆಯುತ್ತಿತ್ತು. 1938ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಯೋಜನಾ ಬೋರ್ಡ್ ರಚಿಸಲು ನಿರ್ಧರಿಸಿದಾಗ, ವಿಜ್ಞಾನ ಕಾಂಗ್ರೆಸ್‌ನ ನಾಯಕರುಗಳಾಗಿದ್ದ ಮೇಘನಾದ್ ಸಹಾ ಮುಂತಾದ ವಿಜ್ಞಾನಿಗಳು ಇದಕ್ಕೆ ಸದಸ್ಯರಾದರು. ದೇಶ ಸ್ವತಂತ್ರವಾದ ಮೇಲೂ ವಿಜ್ಞಾನ ಕಾಂಗ್ರೆಸ್ ವಿಜ್ಞಾನಿಗಳ ಒಂದು ಸ್ವತಂತ್ರ ಸಂಘಟನೆಯಾಗಿ ಮುಂದುವರೆದಿದೆ. ಸರ್ಕಾರದಿಂದ ಸಹಾಯಧನ ಪಡೆಯುತ್ತಿದ್ದರೂ ಇದು ಸರ್ಕಾರಿ ಅಥವಾ ಅರ್ಧ ಸರ್ಕಾರಿ ಸಂಸ್ಥೆ ಅಲ್ಲ. ವಿಶಿಷ್ಟ ವೃತ್ತಿಪರ ಸಂಘಟನೆಯೂ ಅಲ್ಲ.

ಅಧಿವೇಶನ

ಅಧಿವೇಶನದ ಅಧ್ಯಕ್ಷತೆಯನ್ನು ಖ್ಯಾತ ಜೀವ ವಿಜ್ಞಾನಿ ಪ್ರೊ|| ಅರ್ಜನಾ ಶರ್ಮ ವಹಿಸಿದ್ದರು. ಸುಮಾರು 3000 ಪ್ರತಿನಿಧಿಗಳು ದೇಶದ ವಿವಿಧ ಭಾಗಗಳಿಂದ ಭಾಗವಹಿಸಿದ್ದರು. ಅಧಿವೇಶನದ ಸಮಾರೋಪದಲ್ಲಿ ಪ್ರಧಾನ ಮಂತ್ರಿಗಳು ಭಾಗವಹಿಸಿದ್ದರು. ಪ್ರಧಾನಮಂತ್ರಿಗಳ ಸಮಕ್ಷಮದಲ್ಲಿ ಸರ್ಕಾರಕ್ಕೆ ಅಧಿವೇಶನದ ಶಿಫಾರಸು (ಮುಖ್ಯ ವಿಷಯದ ಬಗ್ಗೆ) ಗಳನ್ನು ಈ ಸಭೆಯಲ್ಲಿ ಮಂಡಿಸಲಾಯಿತು.

ಅಧ್ಯಕ್ಷ ಭಾಷಣ, ಅಧಿವೇಶನದ ಚರ್ಚೆ, ಶಿಫಾರಸುಗಳು ದೇಶದ ಸಂಪನ್ಮೂಲಗಳು, ಬೆಳೆಯುತ್ತಿರುವ ಜನರ ಅವಶ್ಯಕತೆಗಳಿಗೆ ಇವನ್ನು ಉಪಯೋಗಿಸುವ ರೀತಿ ಬಗ್ಗೆ ಉತ್ತಮ ವೈಜ್ಞಾನಿಕ ಅಧ್ಯಯನವೆನ್ನಬಹುದು. ದೇಶದ ಸಂಪನ್ಮೂಲಗಳನ್ನು ಅವು ಪರಿಸರ ದರಿದ್ರತೆಗೆ ಎಡೆಗೊಡದಂತೆ ಯಾವ ರೀತಿ ಉಪಯೋಗಿಸಬಹುದು ಎಂಬುದರ ಬಗ್ಗೆ ಒತ್ತು ಇದೆ. ದೇಶದ ಜನರ ಈಗಿನ ಸ್ಥಿತಿ ಮತ್ತು ಅವರ ಉತ್ತಮ ಜೀವನದ ಅವಶ್ಯಕತೆಗಳನ್ನು ಎತ್ತಿ ಹೇಳಲಾಗಿದೆ. ಸಂಪನ್ಮೂಲಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಲು ಅಗತ್ಯವಾದ ವಿಜ್ಞಾನದ ವಿಶಿಷ್ಟ ವಿಭಾಗಗಳನ್ನು, ಕಾರ್ಯಕ್ರಮಗಳನ್ನು ಗುರುತಿಸಿತು. ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಸರ್ಕಾರದ ನೀತಿಗಳ ಯಾವ ವಿಶ್ಲೇಷಣೆಯೂ ಮೂಡಿಬರಲಿಲ್ಲ. ವಿಜ್ಞಾನದ ಇಂದಿನ ದುಸ್ಥಿತಿ, ವಿದೇಶಿ ತಂತ್ರಜ್ಞಾನದ ಆಮದಿನ ದುಷ್ಪರಿಣಾಮಗಳು ಇತ್ಯಾದಿ ವಿಷಯಗಳ ಬಗ್ಗೆ ಅಲ್ಲಲ್ಲಿ ಗುಜು ಗುಜು ಮಾತು ಬಿಟ್ಟರೆ ದೊಡ್ಡ ಪ್ರಮಾಣದಲ್ಲಿ ಚರ್ಚೆ ನಡೆಯಲಿಲ್ಲ. ಯುದ್ಧದ ಮೇಲಿ ಅನಗತ್ಯ ಖರ್ಚು, ಅಣುಯುದ್ಧದ ಅಪಾಯದ ಬಗ್ಗೆನೂ ಇದೇಮಾತು ಹೇಳಬಹುದು. ತಾರಾಸಮರವನ್ನು ವಿರೋಧಿಸುವ ಒಂದು ಸಭೆ, ಈ ಕಾಂಗ್ರೆಸ್‌ಗೆ ಬಂದ ಕೆಲವು ಪ್ರತಿನಿಧಿಗಳು ಪ್ರತ್ಯೇಕವಾಗಿ ಏರ್ಪಡಿಸಿದ್ದರು. ಅಂದರೆ ಕಾಂಗ್ರೆಸ್ ಇದನ್ನು ಒಂದು ವಿಶೇಷ ಸಮಸ್ಯೆಯಾಗಿ ಪರಿಗಣಿಸಲಿಲ್ಲ. ಅಧಿವೇಶನದ ಮುಖ್ಯ ವಿಷಯದ ಬಗೆಗಿನ ಶಿಫಾರಸುಗಳಲ್ಲೂ ತೀರಾ ಹೊಸದು ವಿಶಿಷ್ಟವಾದದ್ದು ಎನ್ನಬಹುದಾದ್ದು ಏನಿಲ್ಲ ಸರ್ಕಾರ ಈಗಾಗಲೇ 7ನೇ ಯೋಜನೆಯ ಅಂಗವಾಗಿ ಗುರುತಿಸಿರುವ "ಹೆಚ್ಚು ಗಮನಿಸಬೇಕಾದ ವಿಜ್ಞಾನವಿಭಾಗ"ಗಳನ್ನೂ, "ತಾಂತ್ರಿಕ ಕಾರ್ಯಕ್ರಮ" ಗಳನ್ನು ಹೆಚ್ಚು ಕಡಿಮೆ ಅನುಮೋದಿಸಿತು. ಜೀವ ತಂತ್ರಜ್ಞಾನ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಇತ್ಯಾದಿ.

ಈ ಲೇಖನದ ಮೊದಲಲ್ಲಿ ಉದ್ಧರಿಸಿದ ವಾಕ್ಯ ಮಾತ್ರ ಮುಖ್ಯವಾದದ್ದು ಎನ್ನಬಹುದು. ವಿಶೇಷವಾಗಿ ಪರಿಸರ ಬಿಕ್ಕಟ್ಟಿನಿಂದ ಬೆಳವಣಿಗೆ ನಿಲ್ಲಿಸಬೇಕು ಎನ್ನುವ ಕೆಲವು ಪರಿಸರವಾದಿಗಳ ವಾದದ ಹಿನ್ನೆಲೆಯಲ್ಲಿ.

ಮೇಲೆ ಹೇಳಿದ ಕೆಲವು ವಿಜ್ಞಾನ ಕಾಂಗ್ರೆಸ್‌ನ ನ್ಯೂನ್ಯತೆಗಳಿಗೆ ಕಾರಣ ಏನು ಎಂಬುದರ ಬಗ್ಗೆ ಎರಡು ಮಾತು ಅಗತ್ಯ. ಸ್ವಾತಂತ್ರ್ಯ ಪೂರ್ವ ಪರಿಸ್ಥಿತಿಯಲ್ಲಿ ಸಣ್ಣ ಸುಸಂಘಟಿತ, ಸೈದ್ಧಾಂತಿಕ ಒಮ್ಮತ ಇದ್ದ ಈ ಸಂಘಟನೆ ವಿಜ್ಞಾನದ ಬೆಳವಣಿಗೆಯ ಜೊತೆಗೆ ಬೆಳೆದಿಲ್ಲ. ಇದರ ಅಂಗ ಸಂಘಟನೆಗಳು (ವಿಜ್ಞಾನ ಬೇರೆ ಬೇರೆ ವಿಭಾಗಗಳ ಆಧಾರದ ಮೇಲೆ) ವಿಜ್ಞಾನದ ಬೆಳವಣಿಗೆಗೆ ಅನುಗುಣವಾಗಿಲ್ಲ. ಉದಾಹರಣೆಗೆ ತಂತ್ರಜ್ಞಾನಕ್ಕೆ ಸಂಬಂಧಪಟ್ಟಹಾಗೆ ಯಾವುದೇ ಅಂಗ ಸಂಘಟನೆ ಇಲ್ಲ. ಇದರ ಸದಸ್ಯತ್ವ ಸಹ ಹಿಂದಿನ ವಿಜ್ಞಾನ ಕೇಂದ್ರವಾಗಿದ್ದ ಕಲ್ಕತ್ತದಲ್ಲಿ ಕೇಂದ್ರಿಕೃತವಾಗಿದೆ. ಯುವ ವಿಜ್ಞಾನಿಗಳನ್ನು ಸದಸ್ಯರನ್ನಾಗಿ ಮಾಡುವ ಪ್ರಯತ್ನ ಕಂಡು ಬಂದಿಲ್ಲ. ಎಲ್ಲದಕ್ಕೂ ಮಿಗಿಲಾಗಿ ಸಂಘಟನೆಗೆ ಒಂದು ಸೈದ್ಧಾಂತಿಕ ಚೌಕಟ್ಟು, ಗುರಿ ಇದ್ದಂತಿಲ್ಲ.

ಭಾರತ ವಿಜ್ಞಾನ ಕಾಂಗ್ರೆಸ್ ಎಂಬ ದೊಡ್ಡ ಉತ್ಸವ ಬೆಂಗಳೂರಿನಲ್ಲಿ ನಡೆಯಿತು. ರಾಜೀವ್ ಗಾಂಧಿಯವರೇ ಈ ಕಾಂಗ್ರೆಸ್ ಅನ್ನು ಸಮಾರೋಪಿಸಿದರು. ಈ ಉತ್ಸವದ ಬಗ್ಗೆ ಒಂದು ಕಿರುನೋಟ.

ಕಾಲೇಜುಗಳ 'ಸ್ವಾಯತ್ತತೆ' ಅಪಾಯಕರ

ಖಾಸಗಿ ವ್ಯಕ್ತಿ, ಸಂಸ್ಥೆಗಳ ವ್ಯಾಪರೀಕರಣಕ್ಕೆ ಹುಲುಸಾದ ಅವಕಾಶ ಒದಗಿಸಲು ಅನುಕೂಲವಾಗಿ ರೂಪಿತವಾಗಿರುವ ಕೇಂದ್ರ ಸರಕಾರದ ನೂತನ ಶಿಕ್ಷಣ ನೀತಿಯ ಜಾರಿಯು ಆರಂಭವಾಗಿದ್ದು–ರಾಷ್ಟ್ರದಲ್ಲಿ ಮೊದಲ ಹಂತವಾಗಿ 500 'ಸ್ವಾಯತ್ತ' ಕಾಲೇಜುಗಳ ಆರಂಭಕ್ಕೆ ನಿರ್ಧಾರ ಕೈಗೊಳ್ಳಲಾಗಿದೆ. ಪ್ರತಿಯೊಂದು ಕಾಲೇಜುಗಳೂ ಸ್ವತ: ಒಂದು ವಿಶ್ವ ವಿದ್ಯಾನಿಲಯಯದಂತೆ ಕೆಲಸ ನಿರ್ವಹಿಸುವ ಸಾಧ್ಯತೆ ಇದ್ದು ವಿದ್ಯಾರ್ಥಿಗಳು ಅಧ್ಯಾಪಕರುಗಳ ಹಾಗೂ ಅಧ್ಯಾಪಕೇತರ ನೌಕರರ ಪ್ರಜಾಸತ್ತಾತ್ಮಕವಾದ ಹಕ್ಕುಗಳ, ಬೇಡಿಕೆಗಳ ಮರ್ಧನ ನಡೆಯಲಿದ್ದು– ಏಕ ರೂಪ ಶಿಕ್ಷಣ ನೀತಿಗೆ ದೊಡ್ಡ ಹೊಡೆತ ಉಂಟಾಗಲಿದೆ. ಖಾಸಗಿ ಕಾಲೇಜುಗಳ ಸರ್ವಾಧಿಕಾರಿ ಆಡಳಿತದ ಒಡೆತದಲ್ಲಿ ಶಿಕ್ಷಣದ ಅಸಮಾಲ್ಯವಾಗಲಿದೆ. ರಾಜ್ಯ ಸಮಿತಿಯು ಈ ಅಪಾಯದ ವಿರುದ್ಧ ಹೋರಾಡಲು ವಿದ್ಯಾರ್ಥಿಗಳಿಗೆ ಕರೆ ನೀಡಿದೆ.

ಕರ್ನಾಟಕದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು "ಎಗ್ರಿಗೇಟ್ ಅಂಕಗಳ" ಪ್ರಶ್ನೆಯನ್ನು ಮುಂದಿರಿಸಿ ನಡೆಸುತ್ತಿರುವ ಹೋರಾಟದ ಬಗ್ಗೆ ವಿಮರ್ಶಿಸಿದ ರಾಜ್ಯ ಸಮಿತಿಯು ಮೂರು ವರ್ಷಗಳ ಸರಾಸರಿ ಅಂಕಗಳ ಆಧಾರದಲ್ಲಿ ತರಗತಿ ನಿರ್ಧರಿಸುವುದು ಹೆಚ್ಚು ವೈಜ್ಞಾನಿಕ ಕ್ರಮವಾದರೂ, ಈ ಕ್ರಮವನ್ನು ಜಾರಿಗೆ ತರುವ ಮೊದಲು ಸಾಕಷ್ಟು ಪೂರ್ವಭಾವಿ ಸೂಚನೆಯನ್ನು ನೀಡಿ ವಿದ್ಯಾರ್ಥಿಗಳು ಹೊಸ ಕ್ರಮಕ್ಕೆ ಹೊಂದಿಕೊಳ್ಳುವ ವಾತಾವರಣ ನಿರ್ಮಿಸದೆ ಏಕಮುಖವಾಗಿ ವಿಶ್ವವಿದ್ಯಾನಿಲಯವು ಧಿಡೀರ್ ಘೋಷಣೆ ಹೊರಡಿಸಿರುವುದು ವಿದ್ಯಾರ್ಥಿಗಳಲ್ಲಿ ಆತಂಕದ ವಾತಾವರಣ ನಿರ್ಮಿಸಿದೆ ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಆದ್ದರಿಂದ ವಿ.ವಿ. ಆಡಳಿತ ವರ್ಗ ತನ್ನ ಆದೇಶವನ್ನು ತಡೆಹಿಡಿದು ವಿದ್ಯಾರ್ಥಿ ಮುಖಂಡರೊಂದಿಗೆ ಮಾತುಕತೆ ನಡೆಸಿ ಪರಿಹಾರ ಕಂಡುಕೊಳ್ಳಲು ಒತ್ತಾಯ ಪಡಿಸಲಾಗಿದೆ.

ದೇಶದ ಯಾವುದೇ ಭಾಗದಲ್ಲಿನೆಲಸಿ, ಉದ್ಯೋಗ ಪಡೆಯುವ ಭಾರತದ ಪ್ರಜೆಯ ಸಂವಿಧಾನ ಬದ್ಧ ಮೂಲಭೂತ ಹಕ್ಕನ್ನೇ ಧಿಕ್ಕರಿಸುವ ರೀತಿಯ ಶಿಫಾರಸ್ಸುಗಳನ್ನು ಒಳಗೊಂಡು ತೀರಾ ಭಾಷಾಂಧತೆಯ ಕಲುಷಿತ ವಾತವರಣ ಸೃಷ್ಟಿಗೆ ಕಾರಣವಾಗುವಂತಹ ಶಿಫಾರಸ್ಸುಗಳನ್ನು ಮಾಡಿರುವ ಸರೋಜಿನಿ ಮಹಿಷಿ ವರದಿಯನ್ನು ರಾಜ್ಯಸಮಿತಿಯು ವಿರೋಧಿಸಿದೆ. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಕ್ಯಾರಿ ಓವರ್ ಪಡೆದಿರುವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ನಿರಾಕರಿಸುವ ಸರ್ಕಾರದ ಇತ್ತೀಚಿನ ನಿರ್ಧಾರವನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಲಾಗಿದೆ.

ಪೌರ ಕಾರ್ಮಿಕರ ಧರಣಿ

ಮೈಸೂರು:

ಮೈಸೂರು ನಗರ ಪೌರ ಕಾರ್ಮಿಕರ ಸಂಘ (ಸಿ. ಐ. ಟಿ. ಯು.) 12-1-87 ರಂದು ಕಾರ್ಪೊರೇಶನ್ ಕಛೇರಿ ಮುಂದೆ ಧರಣಿ ನಡೆಸಿ, ನಗರ ಪಾಲಿಕೆ ಸದಸ್ಯರುಗಳು ಲಕ್ಷಾಂತರ ರೂಪಾಯಿ ಹಣ ವ್ಯಯಿಸಿ ಭಾರತ ಪ್ರವಾಸ ಹೋಗುತ್ತಿರುವುದನ್ನು ತೀವ್ರವಾಗಿ ಖಂಡಿಸಲಾಯಿತು. ಕಮಿಷನರ್‌ರವರಿಗೆ ಪ್ರತಿಭಟನಾ ಮನವಿ ಸಲ್ಲಿಸಲಾಯಿತು. ಮೈಸೂರಿನಲ್ಲಿ ಈ ದುಂದು ವೆಚ್ಚದ ಪ್ರವಾಸದ ಬಗ್ಗೆ ವ್ಯಾಪಕ ಪ್ರತಿಭಟನೆ ಮೂಡಿ ಬಂದಿದೆ.

ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

1987 ಫೆ. 6, 7, 8, ಮೂರು ದಿನಗಳು ಬೆಂಗಳೂರಿನಲ್ಲಿ ಡಿ. ವೈ. ಎಫ್. ಐ. ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಏರ್ಪಡಿಸಲಾಗಿದೆ. ಸಂಬಂಧಪಟ್ಟ ಸಂಗಾತಿಗಳಿಗೆ ಈಗಾಗಲೇ ವಿವರ ತಿಳಿಸಲಾಗಿದ್ದು ಅವರು 6-2-87ರ ಶುಕ್ರವಾರ ಬೆಳಿಗ್ಗೆ ಸುಲ್ತಾನ್‌ಪೇಟೆಯ ಕಛೇರಿಗೆ ಬಂದಿರಬೇಕೆಂದು ವಿನಂತಿ.

ಶಿಬಿರ 6-2-87 ರಂದು ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಉದ್ಘಾಟಿಸಲ್ಪಡುವುದು. ಶಿಬಿರದ ವಿಷಯ ವೈಜ್ಞಾನಿಕ ಬೆಳವಣಿಗೆ, ಸಮಾಜವಾದಿ ಸಮಾಜದ ಬದುಕು. ಕಾರ್ಮಿಕ ವರ್ಗದ ನಾಯಕತ್ವ–ಮತ್ತು ಯುವಜನ ವಿಭಾಗಗಳು, ಪ್ರಚಾರ ಮಾಧ್ಯಮ, ಸಂಸ್ಕೃತಿ, ಸಾಹಿತ್ಯ, ಸಿನೇಮಾ, ಕ್ರೀಡೆ ಹಾಗೂ ಯುವಜನರು ಹಾಗೂ ರಾಜಕೀಯ ಮುಂತಾಗಿ, ನಿರ್ಧರಿಸಲಾಗಿದೆ.

ಪ್ರಜಾಪ್ರಭುತ್ವದ ರಕ್ಷಣೆಗಾಗಿ ಪ. ಬಂಗಾಳ ಎಡರಂಗದ ಹೋರಾಟ

ತೆಲುಗು ದೇಶಂ ಸರ್ಕಾರವನ್ನು ಆಗ ಪ್ರಧಾನಿಯಾಗಿದ್ದ ಇಂದಿರಾಗಾಂಧಿ, ತೆಲುಗುದೇಶಂ ಸರ್ಕಾರವನ್ನು ಉರುಳಿಸಲು ಏನೆಲ್ಲಾ ಮಾಡಿದರು ಎಂಬುದು ಈಗ ಲೋಕಕ್ಕೇ ಗೊತ್ತಿರುವ ವಿಷಯ. ತನ್ನದೆ ಬಳಗವಾದ ಒಂದು ಬಂಡವಾಳಶಾಹಿ ಭೂಮಾಲಕ ವರ್ಗದ ಸರ್ಕಾರದ ಬಗ್ಗೆ ಈ ರೀತಿ ವರ್ತಿಸಿದ ಕೇಂದ್ರ ಸರ್ಕಾರ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಆಳುವ ವರ್ಗದ ನೀತಿಗಳನ್ನು ಧಿಕ್ಕರಿಸುವ ಪರ್ಯಾಯ ನೀತಿಗಳನ್ನು ರೂಪಿಸುವ ಸರ್ಕಾರವೊಂದಕ್ಕೆ ಏನೋ ಮಾಡಿರಬಹುದು ? ನಮ್ಮ ದೇಶದ ಬಂಡವಾಳಶಾಹಿ ಪತ್ರಿಕೆಗಳುಈ ಸುದ್ದಿಗಳನ್ನೇ, ಪ್ರಕಟಿಸಿದೆ ಜನಕ್ಕೆ

ಜನಕ್ಕೆಕೊನೆ ಮೊದಲೆಂಬುದುಉಂಟೆ? ಮರೆಯಾಗಿವೆ.

ಪ. ಬಂಗಾಳದ ಎಡರಂಗ ಸರಕಾರ ಈ ಹತ್ತು ವರ್ಷಗಳಲ್ಲಿ ಅನುಭವಿಸಬೇಕಾಗಿ ಬಂದ ಕಷ್ಟ ಕೋಟಲೆಗಳಿಗೆ ಲೆಕ್ಕವಿದೆಯೆ ?

ಪ್ರಜಾಸತ್ತೆಯ ಭದ್ರ ಕೋಟೆಯಾಗಿರುವ, ಪ್ರಜಾಸತ್ತೆಯ ಅರ್ಥವೇನು ಎಂಬುದನ್ನು ಮೊದಲ ಬಾರಿಗೆ ಗ್ರಾಮೀಣ ಪ್ರದೇಶಗಳು ಮೂಲೆ ಮೂಲೆಗಳಲ್ಲಿ ಗುಡಿಸಲುಗಳಲ್ಲಿಯೂ ಕಾಣಿಸಿರುವ ಪ. ಬಂಗಾಳದ ಮೇಲೆ ಹಣ, ಹೆಂಡಗಳಲ್ಲಿ ಮತದಾರರನ್ನು ಮುಳುಗಿಸಿ ಮತ ಪಡೆಯುವ ಆಳುವ ವರ್ಗಧಾಳಿ ನಡೆಸದಿದ್ದರೆ ಅವರ ಆಳ್ವಿಕೆ ಉಳಿಯಲು ಸಾಧ್ಯವೆ ?

1980 ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ (ಐ) ಪಕ್ಷ ತನ್ನ ಎಲ್ಲಾ ಶಕ್ತಿ ಪ್ರಭಾವವನ್ನೂ ತೊಡಗಿಸಿ ಎಡರಂಗ ಸರ್ಕಾರವನ್ನು ಸೆಣಸಿತು. ಇಡೀ ಪ. ಬಂಗಾಳವನ್ನೇ ಒಂದು ಕೈಗಾರಿಕಾ ಮರುಭೂಮಿಯನ್ನಾಗಿಸುವ ಪ್ರಯತ್ನ, ಕೈಗಾರಿಕೆಗಳನ್ನು ಮುಚ್ಚುವ ಪ್ರಯತ್ನ ಕೈಗಾರಿಕೋದ್ಯಮಿಗಳು ಅಲ್ಲಿ ಯಾವ ಕೈಗಾರಿಕೆಯನ್ನು ಹೊಸದಾಗಿ ಮಾಡಲು ಲೈಸನ್ಸ್ ನಿರಾಕರಣೆ, ಅಲ್ಲಿರುವ ಕೈಗಾರಿಕೆಗಳನ್ನು ಬೇರೆ ರಾಜ್ಯಗಳಿಗೆ ವರ್ಗಾಯಿಸುವಂತೆ ಮಾಡಲು ಪ್ರತ್ಯಕ್ಷ ಪರೋಕ್ಷ ಪ್ರಯತ್ನ, ಪ. ಬಂಗಾಳದ ಯಾವುದೇ ಅಭಿವೃದ್ಧಿ ಕಾರ್ಯಕ್ಕೂ ನಿರಾಕರಿಸುವ ಪ್ರಯತ್ನ ಜನಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ, ನಗರ ಪ್ರದೇಶದಲ್ಲಿ ಕೆಲಸ ಸಿಗದಂತಾದಾಗ ಆ ಅತೃಪ್ತಿಯನ್ನು ಉಪಯೋಗಿಸಿ ಅಧಿಕಾರಕ್ಕೆ ಮತ್ತೆ ಬರುವ ಕಾಂಗ್ರೆಸ್‌ನ ಪ್ರಯತ್ನ, ಪ. ಬಂಗಾಳ ಸರ್ಕಾರದ ಚೆಕ್‌ಗಳಿಗೆ ಹಣ ನೀಡದಂತೆ ರಿಸರ್ವ್ ಬ್ಯಾಂಕ್‌ಗೆ ಆಜ್ಞೆ ಪ. ಬಂಗಾಳ ಸರಕಾರ ಜನರಿಗೆ ಅನುಕೂಲ ಕಲ್ಪಿಸಲು ಮಾಡುವ ಕಾನೂನುಗಳನ್ನು ರಾಜ್ಯಪಾಲರ ಮೂಲಕ ದೆಹಲಿಗೆ ತರಿಸಿ ವರ್ಷಗಟ್ಟಲೇ ಅನುಮತಿ ಕೊಡದೆ ಸಾಮಾನ್ಯರಲ್ಲಿ ನಿರಾಶೆ ಮಾಡುವಂತೆ ಮಾಡುವ ಪ್ರಯತ್ನ ಒಂದೆಡೆ ಉಸಿರು ಕಟ್ಟಿಸುವ ಪ್ರಯತ್ನ ಮತ್ತೊಂದೆಡೆ ಸಿಮೇಎಣ್ಣೆ ಸುರುವಿ ಬೆಂಕಿ ಹಾಕುವ ವಿಚ್ಛಿದ್ರಕಾರಿ ಚಟುವಟಿಕೆಗಳು ಇವೆಲ್ಲವನ್ನೂ ಎದುರಿಸಿ 10 ವರ್ಷಗಳ ಸುದೀರ್ಘಕಾಲ ಜನರ ಒಲವನ್ನು ಉಳಿಸಿಕೊಂಡಿದೆ ಪ. ಬಂಗಾಳ ಸರ್ಕಾರ.

ಈ ಸರ್ಕಾರದ ಉಳಿವು ಕೇವಲ ಪ. ಬಂಗಾಳದ ಜನತೆಗಷ್ಟೇ ಬಿಟ್ಟ ಪ್ರಶ್ನೆಯಲ್ಲ ಇಡೀ ದೇಶದ ದುಡಿಯುವ ವರ್ಗದ ಶ್ರೀ ಸಾಮಾನ್ಯ ಜನರ ಪ್ರಶ್ನೆ ಈ ವಿಷಯವನ್ನು ನಮ್ಮ ಬಂಡವಾಳಶಾಹಿ ಮಾಧ್ಯಮಗಳು ಮಾಡುತ್ತವೆಯೆ ? ಖಂಡಿತ ಇಲ್ಲ.

ಅದನ್ನು ಮಾಡಬೇಕಾದವರು ನಾವು-ನೀವು. ಪ. ಬಂಗಾಳದಲ್ಲಿ ಚುನಾವಣೆಯಲ್ಲಿ ಕಾವೇರಿ,ರಾಜಕೀಯ ಸೈದ್ಧಾಂತಿಕ ಕಾಳಗ ಬಿರುಸಾಗುತ್ತಿರುವಾಗ ನಮ್ಮ ರಾಜ್ಯದಲ್ಲಿಯೂ ಅದರ ಪ್ರತಿಧ್ವನಿ ಕೇಳಬೇಕು. ದುಡಿಯುವ ವರ್ಗದ ನಡುವೆ, ಸಾಮಾನ್ಯ ಜನರ ನಡುವೆ ಹೋಟೆಲ್, ಚಾದುಕಾನ್‌ಗಳಲ್ಲಿ, ಫ್ಯಾಕ್ಟರಿ ಹೊಲ, ಗದ್ದೆಗಳಲ್ಲಿ ಪ. ಬಂಗಾಳದ ಸರ್ಕಾರ, ಕಾಂಗ್ರೆಸ್ ರಾಜ್ಯಗಳ ಸರ್ಕಾರ, ನಮ್ಮ ರಾಜ್ಯದ ಜನತಾ ಸರ್ಕಾರಗಳ ಬಗ್ಗೆ ಚರ್ಚೆಯಾಗಬೇಕು. ಪ. ಬಂಗಾಳದ ಜಿಲ್ಲಾ ಪರಿಷತ್‌ಗಳ ಬಗ್ಗೆ ಕರ್ನಾಟಕದ ಜಿಲ್ಲಾ ಪರಿಷತ್‌ಗಳ ಬಗ್ಗೆ ಮಾತನಾಡಬೇಕು. ಆಗ ಮಾತ್ರ ದುಡಿಯುವ ವರ್ಗದ ಪ್ರತಿನಿಧಿಗಳು ತಮ್ಮ ಕರ್ತವ್ಯ ನಿರ್ವಹಿಸಿದಂತೆ ಆಗುತ್ತದೆ.

(6ನೇ ಪುಟ ನೋಡಿ)

ಪ. ಬಂಗಾಳ ಎಡರಂಗದ ಕಡೆಗೆ ದೇಶದ ದುಡಿಯುವ ಜನತೆ ಕಣ್ಣಾಗಿ ಕುಳಿತಿದೆ.

ಈಗ ನಡೆಯಲಿರುವ ಪ. ಬಂಗಾಳ ಚುನಾವಣೆಗಳು ಆಳುವ ವರ್ಗ ದುಡಿಯುವ ವರ್ಗಗಳ ನಡುವಿನ ಖಡಾಬಡಿ ಹೋರಾಟದ ಕಣ.

ಈಗಾಗಲೇ ಕೇಂದ್ರದ ಅಧಿಕಾರ, ಹಣ "ರಾಜೀವ್ ದರ್ಶನ", "ರಾಜೀವ್ ವಾಣಿ" ಇವುಗಳೊಡನೆ ರಾಜೀವ್‌ಗಾಂಧಿ ಈಗಾಗಲೇ ಕಣಕ್ಕೆ ಧುಮುಕಿದ್ದಾರೆ.

ಈ ರಾಜಕೀಯ ಕಾಳಗದಲ್ಲಿ "ದುಡಿಯುವ ವರ್ಗದ ಕಹಳೆ, ಎಡರಂಗದ ಚುನಾವಣಾ ಪ್ರಣಾಳಿಕೆ" ಯೂ ಮೊಳಗಿದೆ.

ಇನ್ನೇಕೆ ತಡ ?
"ಕಾಳ ಹರೆಕೊಂಬುಗಳೆಬ್ಬಿ
ಮೊಳಗಿ ಏಳಿ
ಬನ್ನಿರಣ್ಣ ಬನ್ನಿರಣ್ಣ
ಅದೋ ಕೂಗು ಕೇಳಿ"
"ಕಾಡ ಸೀಳುತ ಗಾಳಿ
ಬರುವಂತೆ ಬನ್ನಿ"

ಪ್ರಜಾಪ್ರಭುತ್ವದ ಕಾವಲು ಠಾಣೆ

ಜನತಾ ಮಾನ್ಯರ ಹಿತರಕ್ಷಣೆಯ ದೀರ್ಘ ಹೋರಾಟದ ಅನುಭವದ ಆಧಾರದ ಮೇಲೆ ಎಡರಂಗ ಹಿಂದಿನ ಹತ್ತು ವರ್ಷಗಳಲ್ಲಿ ಮೊದಲು 36 ಅಂಶಗಳ ನಂತರ 34 ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಸತತ ಪ್ರಯತ್ನ ನಡೆಸಿತು. ಈಗ ಮುಂದಿನ ಐದು ವರ್ಷಗಳಿಗೆ 16 ಅಂಶಗಳ ಕಾರ್ಯಕ್ರಮದೊಂದಿಗೆ ಕೇಂದ್ರದ ಸಮ್ಮುಖ ಹತ್ತು ಬೇಡಿಕೆಗಳನ್ನು ಎಡರಂಗ ಇಟ್ಟಿದೆ. ಈ ಹತ್ತು ಅಂಶಗಳಲ್ಲಿ ಸಣಬು ಉದ್ಯಮದ ರಾಷ್ಟ್ರೀಕರಣ, ನಿರಾಶ್ರಿತರ ಪುನರ್ವಸತಿಗೆ 750 ಕೋಟಿ ರೂಗಳ ನೆರವು, ನೇಪಾಳೀ ಭಾಷೆಯ ಪ್ರದೇಶದಲ್ಲಿ ಸ್ವಾಯತ್ತ ಆಡಳಿತ ಮುಂತಾದ ಬೇಡಿಕೆಗಳಲ್ಲದೆ ದೇಶದ ಎಲ್ಲಾ ರಾಜ್ಯಗಳ ಜನತೆಯ ಬೇಡಿಕೆಗಳಿಗೆ ದನಿಗೊಡುವ ಅಂಶಗಳು ಇವೆ. ಸಿ. ಪಿ. ಐ. (ಎಂ) ನೇತೃತ್ವದ ಎಡರಂಗ ಸರ್ಕಾರಗಳು ಭಾರತದಲ್ಲಿ ಪ್ರಜಾಪ್ರಭುತ್ವದ ಕಾವಲು ಠಾಣೆಗಳು ಎಂಬ ಸಂಗತಿಯನ್ನು ಇದು ಇನ್ನೊಮ್ಮೆ ಮನಗಾಣಿಸಿಕೊಡುತ್ತದೆ. ಆ ಬೇಡಿಕೆಗಳ ಮುಖ್ಯ ಅಂಶಗಳನ್ನಿಲ್ಲಿ ಕೊಡಲಾಗಿದೆ.

ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಗೆ ಅವಶ್ಯಕ ಸಂವಿಧಾನ ತಿದ್ದುಪಡಿ ತಂದು ರಾಜ್ಯಗಳಿಗೆ ಹೆಚ್ಚು ಸಂವೈಧಾನಿಕ ಹಾಗೂ ಆರ್ಥಿಕ ಅಧಿಕಾರ–ಸಂಚವಾರ್ಷಿಕ ಯೋಜನೆಗಳು ಹಾಗೂ ರೆವಿನ್ಯೂ ಸಂಗ್ರಹ ಕುರಿತಾಗಿ ಅಂತಿಮ ನಿರ್ಣಯದ ಮೊದಲು ರಾಜ್ಯಗಳ ಸಕ್ರಿಯ ಪಾಲುದಾರಿಕೆ. ರಾಜ್ಯ ಸರ್ಕಾರಗಳನ್ನು ಉರುಳಿಸಿ ರಾಷ್ಟ್ರಪತಿ ಆಳ್ವಿಕೆ ಹೇರಲು ಅವಕಾಶ ನೀಡುವ 356 ನೇ ಕಲಮನ್ನು ರದ್ದುಮಾಡುವುದು. ಜಂಟಿ ಪಟ್ಟಿಯ ಅಂಶಗಳ ಬಗ್ಗೆ ಕೇಂದ್ರದ ಒಪ್ಪಿಗೆಗೆ ಒಂದು ಸಮಯಮಿತಿ ನಿಗದಿ ಮಾಡುವುದು.

- ಪ್ರತಿ ವರ್ಷ ಬಜೆಟ್ಟಿನ ಖೋತಾವನ್ನು ಕೇಂದ್ರ ಹಾಗೂ ರಾಜ್ಯಗಳ ನಡುವೆ ಸಮಾನ ರೂಪದಲ್ಲಿ ಹಂಚಬೇಕು. ವೃತ್ತಿ ತೆರಿಗೆ ಹಾಗೂ ಇತರ ಮಹತ್ವಗಳ ತೆರಿಗೆಗಳ ದರ ನಿರ್ಣಯ ಮಾಡುವಾಗ ರಾಜ್ಯಗಳೊಂದಿಗೆ ಸಮಾಲೋಚನೆ.ಆರ್ಥಿಕ ಉತ್ಪಾದನಾ ತೆರಿಗೆಯ ನಿಯಮಗಳನ್ನು ರದ್ದುಗೊಳಿಸುವುದು. ಆಡಳಿತಾತ್ಮಕ ಕ್ರಮಗಳ ಮೂಲಕ ಬೆಲೆ ಹೆಚ್ಚಿಸುವ ಧೋರಣೆಯನ್ನು ನಿಲ್ಲಿಸುವುದು. ಬೆಲೆಯೇರಿಕೆಯಿಂದಾಗಿ ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆ ನೀಡುವ ಪ್ರಶ್ನೆಯಲ್ಲಿ ಕೇಂದ್ರ ಬಾಕಿ ಹಣವನ್ನು ನೀಡಬೇಕು.
- ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಹಿತರಕ್ಷಣೆಗೆ ಕಚ್ಚಾ ಸಾಮಗ್ರಿಯ ಪೂರೈಕೆ, ಮಾರುಕಟ್ಟೆ ಹಾಗೂ ಹಣ ವಿಯೋಗಕ್ಕೆ ಸಂಬಂಧಪಟ್ಟಂತೆ ಬ್ಯಾಂಕುಗಳ ಧೋರಣೆಯನ್ನು ಉದಾರಗೊಳಿಸಬೇಕು.
- ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು.
- 14 ಪ್ರಮುಖ ಜೀವನಾವಶ್ಯಕ ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪೂರೈಸಬೇಕು. ದೇಶಾದ್ಯಂತ ಇವುಗಳ ಬೆಲೆ ಒಂದೇ ಆಗಿರಬೇಕು.
- ಶಿಕ್ಷಣವನ್ನು ಮತ್ತೆ ರಾಜ್ಯ ಪಟ್ಟಿಗೆ ವರ್ಗಾಯಿಸಬೇಕು.
- ಸಂಸತ್ತಿನಿಂದ ಹಿಡಿದು ಎಲ್ಲಾ ಚುನಾಯಿತ ಸಂಸ್ಥೆಗಳಿಗೆ ಮತದಾನದ ವಯಸ್ಸನ್ನು 18 ಕ್ಕಿಳಿಸಬೇಕು.
- ರೋಗಗ್ರಸ್ತ ಉದ್ಯಮಗಳನ್ನು ಮತ್ತೆ ಚುರುಕುಗೊಳಿಸುವಲ್ಲಿ ಅವುಗಳ ಹಿಂದಿನ ನಷ್ಟಗಳನೆಲ್ಲಾ ರಾಜ್ಯಸರ್ಕಾರಗಳ ತಲೆಗೆ ಕಟ್ಟುವ ನೀತಿ ಬದಲಾಗಬೇಕು.
- ದೂರದರ್ಶನದ ಎರಡನೇ ಚಾನಲ್‌ನ ಜವಾಬ್ದಾರಿ ರಾಜ್ಯ ಸರ್ಕಾರಕ್ಕೆ ವಹಿಸುವುದು. ದೂರದರ್ಶನ ಹಾಗೂ ಆಕಾಶವಾಣಿಯನ್ನು ನಡೆಸುವಲ್ಲಿ ರಾಜ್ಯ ಸರ್ಕಾರಗಳ ಹೇಳಿಕೆಗಳಿಗೆ ಮಹತ್ವ ನೀಡಬೇಕು.

ಚುನಾವಣೆಯಿಂದ ಚುನಾವಣೆಗೆ

ಧೃಡಗೊಳ್ಳುತ್ತಿರುವ ಎಡರಂಗ

ಇಪ್ಪತ್ತು ವರ್ಷಗಳ ಹಿಂದೆ ಮೊದಲ ಬಾರಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ಅರವತ್ತಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಸಂಯುಕ್ತ ರಂಗ ಸರ್ಕಾರ ಸ್ಥಾಪಿಸಿದ ಬಳಿಕ ಈ ಎರಡು ದಶಕಗಳು ಅದು ಗಳಿಸಿಕೊಂಡಿರುವ ಬಲ ಅಪಾರವಾದದ್ದು. 1967ರಲ್ಲಿ ಒಮ್ಮೆ, 1969 ರಲ್ಲಿ ಇನ್ನೊಮ್ಮೆ ಅತ್ಯಧಿಕ ಸ್ಥಾನ ಗಳಿಸಿದ ಸಿ. ಪಿ. ಐ. [ಎಂ] ಎರಡು ಬಾರಿ ಸಂಯುಕ್ತರಂಗ ಸರ್ಕಾರ ರಚಿಸಿದ್ದರೂ ಕೇಂದ್ರ ಸರಕಾರ ಮತ್ತು ಸಂಯುಕ್ತ ರಂಗದೊಳಗೇ ಇದ್ದ ಕೆಲವು ಪಕ್ಷಗಳ ಪಿತೂರಿಯಿಂದಾಗಿ ಸಂಯುಕ್ತರಂಗ ಸರ್ಕಾರವನ್ನು ಉರುಳಿಸಲಾಯಿತು. ಇದರೊಂದಿಗೇ ಕಾಂಗ್ರೆಸ್ ಪಕ್ಷವು ನಕ್ಸಲೀಯರು ಮತ್ತು ಸಿ. ಪಿ. ಐ. ನ ಜೊತೆಗೂಡಿ ನಡೆಸಿದ ವ್ಯಾಪಕ ದಬ್ಬಾಳಿಕೆಯನ್ನು ಸಿ. ಪಿ. ಐ. [ಎಂ] ಎದುರಿಸಬೇಕಾಯಿತು. ಇಂತಹ ದಬ್ಬಾಳಿಕೆಯ ನಡುವೆಯೂ 1971ರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ 111 ಸ್ಥಾನಗಳಿಸಿ ರಾಜ್ಯದಲ್ಲಿ ಅತ್ಯಂತ ಹೆಚ್ಚು ಬಲಶಾಲಿಯಾದ ಪಕ್ಷ ತಾನೆಂಬುದನ್ನು ತೋರಿಸಿಕೊಟ್ಟಿತು. ಈ ಹಿನ್ನೆಲೆಯಲ್ಲಿ 1972 ರಲ್ಲಿ ಕಾಂಗ್ರೆಸ್ ಸರ್ಕಾರವು ಮೋಸದ ಚುನಾವಣೆ ನಡೆಸಿ ತಾನು ಅಧಿಕಾರಕ್ಕೆ ಬಂತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಈ ಅವಧಿಯಲ್ಲಿ ನಡೆದ ದಬ್ಬಾಳಿಕೆಗೆ ಮಿತಿಯೇ ಇರಲಿಲ್ಲ. ಪಕ್ಷದ ಸಾವಿರಾರು ಕಾರ್ಯಕರ್ತರು ಮತ್ತು ಹಿತೈಷಿಗಳ ಕಗ್ಗೊಲೆಯಾಯಿತು. ಲಕ್ಷಾಂತರ ಜನರನ್ನು ಮನೆ ಬಿಟ್ಟು ಓಡಿಸಲಾಯಿತು. ನಮ್ಮ ಪಕ್ಷ ಇದನ್ನೆಲ್ಲ ಎದುರಿಸಿ ಉಳಿದಿದೆ. ಈ ಎಲ್ಲಾ ಬಲಿದಾನಗಳ ಫಲವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಇಂದು ಪ. ಬಂಗಾಳದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆದು ಬಂದುದೇ ಅಲ್ಲದೆ ಇಡೀ ದೇಶದ ರಾಜಕೀಯ ಆಗುಹೋಗುಗಳ ಮೇಲೆ ಪರಿಣಾಮ ಬೀರಬಲ್ಲ ಮತ್ತು ಪ್ರಜಾಪ್ರಭುತ್ವ ಹಾಗೂ ದುಡಿಯುವ ಜನತೆಯ ಹಕ್ಕುಗಳ ರಕ್ಷಣೆ ಮಾಡಬಲ್ಲ ಕಾವಲಿನ ಕೋಟೆಯಾ

[6ನೇ ಪುಟ ನೋಡಿ)

ದೇಶದ ಜನತೆ ಎಡರಂಗದ ಕಡೆಗೆ ಏಕೆ ನೋಡುತ್ತಿದೆ ?

ಈ ಹತ್ತು ವರ್ಷಗಳ ಕಾಲ ಎಡಬಿಡದೆ ಜನರನ್ನು ಸೆಳೆದ, ಕಾಂಗ್ರೆಸ್ (ಐ) ಧಾಳಿಗೆ ಮಣಿಯದೆ ಸೆಡ್ಡು ಹೊಡೆದ, ಗುಟ್ಟ್ಯಾವುದು ?

ಈ ಸರ್ಕಾರ ನಮ್ಮದು, ನಮಗಾಗಿಯೇ ಇರುವ ಸರಕಾರ ಎಂಬ ಮಾತು ದುಡಿವ ಜನಮನದಲ್ಲಿ ಮೂಡಿ ಮೊಳೆತು ಹೆಮ್ಮರವಾಗುವಂತೆ ಕೆಲಸ ಮಾಡಿದ ಗುಟ್ಟು ಇಲ್ಲಿದೆ ನೋಡಿ.

ಎಡರಂಗ 1977ರಲ್ಲಿ ತಾನು ಅಧಿಕಾರಕ್ಕೆ ಬಂದ ಕೂಡಲೇ ಅದರ ಮೊದಲುತುರ್ತು ಪರಿಸ್ಥಿತಿಯಲ್ಲಿ ನಿಷ್ಕರುಣೆಯಿಂದ ಕಸಿದುಕೊಳ್ಳಲ್ಪಟ್ಟ ಪ್ರಜ ಪ್ರಭುತ್ವ ಹಾಗೂ ನಾಗರೀಕ ಹಕ್ಕುಗಳನ್ನು ಮತ್ತೆ ಸ್ಥಾಪಿಸಿರಾಜ್ಯದ ಎಲ್ಲಾ ವಿಭಾಗಗಳೂ, ವಿಶೇಷವಾಗಿ ಕಾರ್ಮಿಕರು, ರೈತರು ಹಾಗೂ ಕೃಷಿ ಕಾರ್ಮಿಕರುಇದನ್ನು ಅಡೆ-ತಡೆಯಿಲ್ಲದೆ ಅನುಭವಿಸಲು ಸಾಧ್ಯವಾಗುವಂತೆ ಸತತ ಪ್ರಯತ್ನ ನಡೆಸುತ್ತಾ ಬಂದಿದೆ.

ಕಾಂಗ್ರೆಸ್ ಆಳ್ವಿಕೆಯ ಎರಡು ದಶಕದ ಕಾಲ ಚುನಾವಣೆಯೆಂಬುದೇ ನಡೆಯದ ಎಲ್ಲಾ ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಿದ್ದೇ ಪ್ರಜಾಪ್ರಭುತ್ವೀಕರಣದ ರಂಗದಲ್ಲಿ ಎಡರಂಗದ ಪ್ರಮುಖ ಸಾಧನೆ. 1978 ಜುಲೈ 4ರಂದು ಜಿಲ್ಲಾ ಪರಿಷತ್, ಪಂಚಾಯಿತ್ ಸಮಿತಿ ಹಾಗೂ ಗ್ರಾಮ ಪಂಚಾಯತ್‌ಗಳೆಂಬ ಮೂರು ಸ್ತರಗಳುಳ್ಳ ಪಂಚಾಯತಿ ರಾಜ್ಯ ವ್ಯವಸ್ಥೆ ಜಾರಿಗೆ ಬಂದು ಚುನಾವಣೆಗಳು ನಡೆಸಲ್ಪಟ್ಟವು. ಇದರಿಂದ ಹುಟ್ಟಿ ಮೊದಲ ಭಾರಿಗೆ ಗ್ರಾಮೀಣ ಜನತೆಯ ಆಶೋತ್ತರಗಳಿಗೆ ದನಿ ಕೊಡುವ, ಗ್ರಾಮೀಣ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸುವ ಕಾರ್ಯ ಆರಂಭವಾಯಿತು. 1983ರಲ್ಲಿ ಈ ಸಂಸ್ಥೆಗಳಿಗೆ ಮತ್ತೊಮ್ಮೆ ಚುನಾವಣೆಗಳು ನಡೆದವು. ಭೂಸುಧಾರಣೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಅದರ ಫಲ ಬಡ ಹಾಗೂ ಭೂಹೀನ ರೈತರಿಗೆಈಗ ಸಿಗುವಂತಾಗಿರುವುದು ಈ ಪಂಚಾಯತುಗಳಿಂದಲೇ. ಕೂಲಿಗಾಗಿ ಕಾಳು ಎನ್.ಆರ್.ಇ.ಪಿ. ಹಾಗೂ ಆರ್.ಎಲ್.ಇ.ಜಿ.ಪಿ. ಕಾರ್ಯಕ್ರಮಗಳನ್ನು ಪಶ್ಚಿಮ ಬಂಗಾಳದಲ್ಲಿ ಯಶಸ್ವಿಯಾಗಿ ಈ ಸಂಸ್ಥೆಗಳು ಅನುಷ್ಠಾನಕ್ಕೆ ತಂದಿವೆಯೆಂಬುದನ್ನು ದೆಹಲಿಯ ಯೋಜನಾ ಸಮಿತಿ ಕೂಡಾ ಒಪ್ಪಿಕೊಂಡಿವೆ.

ಈ ದಶಕದ ಆರಂಭದಲ್ಲಿ ಎಡರಂಗ ಸರಕಾರ ನೇಮಿಸಿದ ನಗರಾಭಿವೃದ್ಧಿ ವಿಧಾನ ಕುರಿತಾದ ಸಮಿತಿ ನಗರಗಳ ಸ್ಥಳೀಯ ಸಂಸ್ಥೆಗಳಿಗೆ ನಗರಾಭಿವೃದ್ಧಿ ಜವಾಬ್ದಾರಿ ಹಾಗೂ ಸಂಪನ್ಮೂಲಗಳನ್ನು ವಿಕೇಂದ್ರೀಕರಿಸಬೇಕೆಂದು ಶಿಫಾರಸು ಮಾಡಿತು. ಇದು ಜಾರಿಗೆ ಬಂದಿದ್ದು ನಗರಾಭಿವೃದ್ಧಿ ಧೋರಣೆಯಲ್ಲಿ ಒಂದು ತೀವ್ರಗಾಮೀ ಬದಲಾವಣೆಯನ್ನು ತಂದಿದೆ. ನಗರಸಭೆಗಳಿಗೆ ಚುನಾವಣೆಗಳು ನಡೆದು ಅವಕ್ಕೆ ಅಭಿವೃದ್ಧಿ ನಿಧಿಗಳನ್ನು ಮಂಜೂರುಮಾಡಿ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುವ ಅವಕಾಶ ನೀಡಲಾಗಿದೆ

1985-86ರಲ್ಲಿ ಆರಂಭವಾದ ಬ್ಲಾಕ್ ಮಟ್ಟದವರೆಗಿನ ವಿಕೇಂದ್ರೀಕೃತ ಯೋಜನೆ ದೇಶದ ಯೋಜನಾ ಪ್ರಕ್ರಿಯೆಯಲ್ಲಿ ಒಂದು ಹೊಸ ಪ್ರಯೋಗ. ಇದು ಸಮಸ್ತ ಜನತೆಯನ್ನು ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವ ಒಂದು ಧೀರ ಹೆಜ್ಜೆಯೆಂದು ದೇಶದ ಹಲವೆಡೆ ಹಲವಾರು ಮಂದಿ ಇದನ್ನು ಸ್ವಾಗತಿಸಿದ್ದಾರೆ.

ಈ ಹತ್ತುವರ್ಷಗಳಲ್ಲಿ ಎಡರಂಗ ಸರ್ಕಾರದ ಅವ್ಯಾಹತ ಪ್ರಯತ್ನಗಳಿಂದಾಗಿ ಕೈಗಾರಿಕಾ ಹಾಗೂ ಕೃಷಿ ವಲಯದಲ್ಲಿ ಸ್ಪಷ್ಟವಾಗಿ ಎದ್ದುಕಾಣುವ ಮುನ್ನಡೆ ಸಾಧ್ಯವಾಗಿವೆ. ಎಡರಂಗದ ಸರ್ಕಾರ ಕೈಗೊಂಡ ಹಲವಾರು ಕ್ರಮಗಳಿಂದಾಗಿ ಅತೀವ ಬರಗಾಲದ ಎರಡು ವರ್ಷಗಳನ್ನು ಬಿಟ್ಟರೆ ಉಳಿದಂತೆ ಕೃಷಿ ಉತ್ಪಾದನೆಯಲ್ಲಿ ಸತತ ಪ್ರಗತಿ ಕಂಡು ಬಂದಿದೆ. ಗ್ರಾಮೀಣ ಅಭಿವೃದ್ಧಿಯ ಪ್ರಯತ್ನದಲ್ಲಿ ಎಡರಂಗದ ಮುಖ್ಯ ಒತ್ತು ಭೂಸುಧಾರಣೆಗಳ ಮೇಲೆ. 1985ರ ಅಂತ್ಯದ ವರೆಗೆ 12.5 ಲಕ್ಷ ಎಕ್ರೆ ಹೆಚ್ಚುವರಿ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದು, ಅದರಲ್ಲಿ ಈಗಾಗಲೇ 8.10 ಲಕ್ಷ ಎಕ್ರೆಯನ್ನು 16.2 ಲಕ್ಷ ಬಡ ಹಾಗೂ ಭೂಹೀನ ರೈತರಿಗೆ ಹಂಚಲಾಗಿದೆ. ಇವರಲ್ಲಿ ಸುಮಾರು 55% ಹರಿಜನ ಗಿರಿಜನ ಪಂಗಡಗಳಿಗೆ ಸೇರಿದವರು ಎಂಬುದು ಗಮನಾರ್ಹ. ಬರ್ಗಾದಾರರ ಬೇಸಾಯದ ಹಕ್ಕನ್ನು ರಕ್ಷಿಸಲು ಸೂಕ್ತ ಕ್ರಮಗಳು ಈಗಾಗಲೇ ಜಾರಿಗೆ ಬಂದು 13.33 ಲಕ್ಷ ಬರ್ಗಾದಾರರ ದಾಖಲಾತಿ ಪೂರ್ಣಗೊಂಡಿದೆ.

1975ರ ಮನೆ ನಿವೇಶನ ಜಮೀನು ಸ್ವಾಧೀನ ಶಾಸನದ ಜಾರಿಯಲ್ಲೂ ಗಮನಾರ್ಹ ಯಶಸ್ಸು ಸಿಕ್ಕಿದೆ; 2.08 ಲಕ್ಷ ಜನರು ಪಂಚಾಯತು ಸಂಘಟನೆಗಳ ಮೂಲಕ ಮನೆ ನಿವೇಶನಗಳ ಹಕ್ಕು ಪಡೆಯುವಂತಾಗಿದೆ.

60 ವರ್ಷ ಮೀರಿದ ಕೃಷಿ ಕಾರ್ಮಿಕರಿಗೆ, ಬರ್ಗಾದಾರರಿಗೆ ಹಾಗೂ 3ಛೀಘಾಕ್ಕಿಂತ ಕಮ್ಮಿ ಜಮೀನಿರುವ ಬಡರೈತರಿಗೆ 60 ರೂ. ಮಾಸಾಶನ ನೀಡುವ ಯೋಜನೆಯನ್ನು 1980-81 ರಿಂದ ಜಾರಿಗೆ ಬಂದಿದೆ.

ಏಪ್ರಿಲ್ 1981ರಲ್ಲಿ ಪಶ್ಚಿಮ ಬಂಗಾಳ ವಿಧಾನ ಸಭೆ ಭೂಸುಧಾರಣೆಗಳತಿದ್ದುಪಡಿಶಾಸನಕ್ಕೆಐದು-ವರ್ಷಗಳ ದೀರ್ಘ ಅವಧಿಯ ಎಡರಂಗದ ನಿರಂತರ ಪ್ರಯತ್ನಗಳ ನಂತರ ಈಗ ರಾಷ್ಟ್ರಪತಿಯವರ ಅನುಮತಿ ದೊರೆತಿದೆ. ಇದರಿಂದಾಗಿ ಜಮೀನಿನ ನಿರೂಪಣೆಯ ವಿಸ್ತಾರ ಹೆಚ್ಚಿದ್ದು ಸಾಕಷ್ಟು ಹೆಚ್ಚುವರಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದಲ್ಲದೆ ದಾಖಲಾತಿ ಬರ್ಗಾದಾರರಿಗೆ ಕೃಷಿ ಜಮೀನು ಪಡೆಯಲು ಸಾಲ ಸೌಲಭ್ಯ ನೀಡಲು ರಾಜ್ಯ ಭೂ ನಿಗಮ ಹಾಗೂ ಪ್ರಾದೇಶಿಕ ಭೂ ನಿಗಮಗಳನ್ನು ಸ್ಥಾಪಿಸಲು, ಸಣ್ಣ ಹಿಡುವಳಿದಾರರಿಗೆ ಸಾಲ ಹಾಗೂ ಇತರ ನೆರವು ನೀಡಲು ಸಾಮಾನ್ಯ ಸೇವಾ ಸಹಕಾರಿ ಸಮಿತಿಗಳನ್ನ ಸ್ಥಾಪಿಸಲು ಈಗ ಸಾಧ್ಯವಾಗಿದೆ.

ಕೇಂದ್ರ ಸರ್ಕಾರದಹಣ ಹೂಡಿಕೆಯ ಅಭಾವ ಹಾಗೂ ಹಣಕಾಸು ಸಂಸ್ಥೆಗಳ ಸಾಲ ಸೌಲಭ್ಯದ ಅಭಾವದಿಂದಾಗಿ ಸ್ಥಗಿತತೆಯನ್ನು ಎದುರಿಸುತ್ತಿದ್ದ ಪ. ಬಂಗಾಳದ ಕೈಗಾರಿಕಾ ರಂಗ ಈಗ ಎಡರಂಗ ಸರ್ಕಾರದ ಕೈಗಾರಿಕಾ ನೀತಿಯಿಂದಾಗಿ ನಿರಾಳವಾಗಿ ಉಸಿರಾಡುವಂತಾಗಿದೆ. ಹಲ್ದಿಯಾ ಪೆಟ್ರೋ-ರಾಸಾಯನಿಕ ಸಂಕೀರ್ಣದಂತಹ ಕೆಲವು ದೊಡ್ಡ ಪ್ರಮಾಣದ ಕೈಗಾರಿಕೆಗಳು ಸದ್ಯದಲ್ಲೇ ಕಾರ್ಯಾರಂಭ ಮಾಡಲಿವೆ. ಹೆಚ್ಚು ಉದ್ಯೋಗಾವಕಾಶ ನೀಡುವ ಸಣ್ಣ ಪ್ರಮಾಣದ ಮತ್ತು ಗುಡಿ ಕೈಗಾರಿಕೆಗಳ ಪುನರುಜ್ಜೀವನ ಹಾಗೂ ವಿಸ್ತರಣೆ ಇನ್ನೊಂದು ಗಮನಾರ್ಹಸಾಧನೆ. ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಎಡರಂಗ ಸರಕಾರ ಎಂತಹ ಸಾಧನೆ ಮಾಡಬಲ್ಲದು ಎಂಬುದಕ್ಕೆ ಇದೊಂದು ಉದಾಹಾರಣೆಯಷ್ಟೆ.

ಸಾರ್ವಜನಿಕ ವಿತ್ತರಣಾ ವ್ಯವಸ್ಥೆಯನ್ನು ಬಲಪಡಿಸಲು ಪ್ರತಿಯೊಂದು ಜಿಲ್ಲೆ, ಪಂಚಾಯತು ಹಾಗೂ ನಗರ ಸಭೆ ಮಟ್ಟದಲ್ಲಿ ಸಲಹಾ ಸಮಿತಿಗಳನ್ನು ರಚಿಸಿ ಜೀವನಾವಶ್ಯಕ ಸಾಮಗ್ರಿಗಳ ಸರಿಯಾದ ಸಂಗ್ರಹಣೆ ಹಾಗೂ ವಿತರಣೆ ಮಾಡುವಂತೆ, ಈ ವಿತರಣಾ ವ್ಯವಸ್ಥೆ ದೂರ-ದೂರದ ಹಳ್ಳಿಗಳಿಗೂ ತಲುಪುವಂತೆ ಮಾಡಲು ಸಾಧ್ಯವಾಗಿದೆ.

ಇದೆಲ್ಲಕ್ಕೂ ಮಿಗಿಲಾಗಿ ಎಲ್ಲಾ ಜನವಿಭಾಗಗಳ ಪ್ರತಿನಿಧಿ ಸಂಘಟನೆಗಳ ಜೊತೆಗೆ ಸತತ ಸಂಪರ್ಕ ಹಾಗೂ ಅವರಿಗೆ ಸದ್ಯದ ಬೂರ್ಜ್ವಾ-ಭೂಮಾಲೀಕ ವ್ಯವಸ್ಥೆಯಿಂದಾಗಿ ರಾಜ್ಯ ಸರ್ಕಾರ ಎದುರಿಸಬೇಕಾದ ಸಮಸ್ಯೆಗಳು ಹಾಗೂ ತೊಂದರೆಗಳ ಬಗ್ಗೆ ಸದಾ ತಿಳಿಸುತ್ತಿದ್ದುದರ ಫಲವಾಗಿ ರಾಜ್ಯದ ಬಹು ಪಾಲು ಜನತೆಯ ಪ್ರಜ್ಞೆಯ ಮಟ್ಟವನ್ನು ಎತ್ತರಿಸುವುದು ಸಾಧ್ಯವಾಗಿದೆ. ರಾಜ್ಯ ಸರ್ಕಾರದಿಂದ ಮೂಲಭೂತ ಬದಲಾವಣೆ ಈಗಿನ ವ್ಯವಸ್ಥೆಯಲ್ಲಿ ಸಾಧ್ಯವಿಲ್ಲ, ಆದರೂ ಈಗಿನ ಮಿತಿಯಲ್ಲೇ ಜನರಿಗೆ ಪರಿಹಾರ ಒದಗಿಸಲು ಎಡರಂಗ ಸರ್ವ ಪ್ರಯತ್ನ ಮಾಡಿದೆಯೆಂಬುದನ್ನು ಹಿಂದಿನ ಕಾಂಗ್ರೆಸ್ ಆಳ್ವಿಕೆಯೊಂದಿಗೆ ಜನ ಹೋಲಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಎಡರಂಗ ಸರ್ಕಾರ ಕೇಂದ್ರ ಸರ್ಕಾರದ ಜನ-ವಿರೋಧಿ ಧೋರಣೆಗಳ ವಿರುದ್ಧ ಸದಾ ದನಿಯೆತ್ತಿದೆ, ಕೇಂದ್ರ-ರಾಜ್ಯ ಸಂಬಂಧಗಳ ಮರುವ್ಯವಸ್ಥೆಗಾಗಿ ಬಲವಾದ ಬೇಡಿಕೆಯಿಟ್ಟ ಮೊದಲ ಸರ್ಕಾರ ಎಡರಂಗದ್ದು ಎಂಬುದನ್ನು ಹೆಚ್ಚೆಚ್ಚು ಜನ ಈಗ ಅರಿಯಲಾರಂಭಿಸಿದ್ದಾರೆ. ಭಾರತದ ಪ್ರಜಾಪ್ರಭುತ್ವ ಆಂದೋಲನಕ್ಕೆ ಇದೊಂದು ಅಮೂಲ್ಯ ಕೊಡುಗೆ.

ವರ್ಷದ ವ್ಯಕ್ತಿ ಕಾ|| ಜ್ಯೋತಿಬಸು

"ಇಡೀ ದೇಶದ, ತುಳಿತಕ್ಕೊಳಗಾದ ಜನತೆ ಪ. ಬಂಗಾಳದತ್ತ ನೋಡುತ್ತಿದೆ." ಎಂಬ ಕಾಂ. ಜ್ಯೋತಿಬಸುರವರ ಮಾತಿಗೆ, ಇತ್ತೀಚೆಗೆ ಆರಂಭವಾಗಿರುವ "ಮಾರ್ದನಿ" ಎಂಬ ಪತ್ರಿಕೆಯೊಂದು ತನ್ನ ಕಾಕ ಧ್ವನಿಯನ್ನು ಹೀಗೆ ಹೊರಡಿಸಿತು. ಅದು ಜ್ಯೋತಿ ಬಸುರವರ ಈ ಮಾತುಗಳನ್ನು ತನ್ನ ಪತ್ರಿಕೆಯಲ್ಲಿ ಉದ್ಧರಿಸಿದು ಹೀಗೆ "ನಮ್ಮ ಸರಕಾರ ಪಶ್ಚಿಮ ಬಂಗಾಳದ ಸರ್ಕಾರ ಮಾತ್ರ ಅಲ್ಲ, ಸಂಕಟ ಪಡುತ್ತಿರುವ ಇಡೀ ದೇಶದ ಜನಗಳ ಸರ್ಕಾರ." ಅದಕ್ಕೆ ಪ್ರತಿಕ್ರಿಯೆಯಾಗಿ ಆ ಪತ್ರಿಕೆ "ಇದು ಅತ್ಯಾಶಯವಾಯಿತು. ಬಸು ದೇಶದ ಪ್ರತೀ ಮಾರ್ಕ್ಸಿಸ್ಟರಿಗೆ ನಾಯಕರಂತೆ ಭಾಸವಾಗಿರಬಹುದು. ಪ. ಬಂಗಾಳದಲ್ಲಿ ಅಜರಾಮರವಾಗಿ ಅಧಿಕಾರ ರೂಢರಾಗಿರಬಹುದು, ಕರ್ನಾಟಕದಲ್ಲಾಗಲೀ, ಉ. ಪ್ರದೇಶದಲ್ಲಾಗಲೀ, ಗುಜರಾತ್‌ನಲ್ಲಾಗಲೀ ಎಂದಿಗೂ ಕನಸುಕಾಣಲಾರರು. ಅಷ್ಟೇ ಅಲ್ಲ-ದೇಶದ ಸಂಕಟ ಇನ್ನೂ ಸ್ಪಷ್ಟವಾಗಿ ಅರ್ಥವಾಗಿಲ್ಲ ಬಸರವರಿಗೆ. ಇತ್ತೀಚಿನ ಪಶ್ಚಿಮ ಬಂಗಾಳದ ನಡವಳಿಕೆಗಳೇ ಇದನ್ನು ಹೇಳುತ್ತವೆ. ಪಶ್ಚಿಮ ಬಂಗಾಳದ ಸರ್ಕಾರ ಅಲ್ಲಿಯ ಎಲ್ಲ ಜನಗಳ ಸರ್ಕಾರವಾದರೆ ಸಾಕು"

ಇದಕ್ಕೆ ನಾನು ಉತ್ತರ ಕೊಡುವ ಗೋಜಿಗೆ ಹೋಗಬೇಕಾದ್ದಿಲ್ಲ. ಏಕೆಂದರೆ ಈ ಮಾತುಗಳನ್ನು ಬರೆದ ಒಂದೇ ವಾರದಲ್ಲಿ ಕನ್ನಡದ ಮತ್ತೊಂದು ವಾರಪತ್ರಿಕೆಯಾದ "ಲಂಕೇಶ್ ಪತ್ರಿಕೆ"ಇದೇ ಕಾ|| ಜ್ಯೋತಿಬಸುರವರನ್ನು ವರ್ಷದ ವ್ಯಕ್ತಿಯಾಗಿ ಆರಿಸಿತು.

ಪಶ್ಚಿಮ ಬಂಗಾಳದಿಂದ ಅತೀ ದೂರವಿರುವ ಕರ್ನಾಟಕದ ಒಂದು ಪತ್ರಿಕೆ ಏಕೆ ಈ "ಬಂಗಾಳಿ" ನಾಯಕನನ್ನು "ವರ್ಷದ ವ್ಯಕ್ತಿ" ಯನ್ನಾಗಿ ಆರಿಸಬೇಕಾಯಿತು, ಅದೂ ಕೂಡ ರಾಜೀವ್ ಗಾಂಧಿ, ರಾಮಕೃಷ್ಣ ಹೆಗ್ಗಡೆ, ವಿ.ಪಿ. ಸಿಂಗ್ ಇನ್ನೂ ಅನೇಕ ಪ್ರಖ್ಯಾರನ್ನು ಬಿಟ್ಟು ?

ಕರ್ನಾಟಕದ ಪತ್ರಿಕೆಯೊಂದು ಜ್ಯೋತಿಬಸುರವರನ್ನು ವರ್ಷದ ವ್ಯಕ್ತಿಯಾಗಿ ಆಯ್ಕೆ ಮಾಡಿದ್ದೇ ಸಾಕು, ನಮ್ಮ ರಾಜ್ಯದ ಜನತೆಗೂ ಪಶ್ಚಿಮ ಬಂಗಾಳ ಸರ್ಕಾರದ ಬಗ್ಗೆ, ಅದರ ಸಾಧನೆಯ ಬಗ್ಗೆ ಆಸಕ್ತಿ ಇದೆ ಎಂಬುದನ್ನು ತೋರಿಸುವುದಕ್ಕೆ ಇನ್ನೂ ಲಂಕೇಶ್ ಪತ್ರಿಕೆಯ ಮಾತುಗಳನ್ನೇ ನೋಡಿ:

ನಮ್ಮ ಪ್ರಕಾರ ರಾಜೀವ್‌ರಿಗೆ ನಿಜವಾದ ಪಾಠ ಹೇಳಿಕೊಡಬಲ್ಲ ವ್ಯಕ್ತಿ ಜ್ಯೋತಿ ಬಸು ಈ ವರ್ಷದ ವ್ಯಕ್ತಿಯಾಗಿ ನಮ್ಮ ಆಯ್ಕೆ "ಪ. ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ನಮ್ಮ ದೇಶದ ಹಿರಿಯ ರಾಜಕಾರಣಿಗಳಲ್ಲೊಬ್ಬರು. ಅವರಿಗಾಗಲೇ ಎರಡು ಬಾರಿ ಮುಖ್ಯ ಮಂತ್ರಿಯಾಗಿದ್ದು ಬಂಗಾಳದಲ್ಲಿ ಭೂಸುಧಾರಣೆಯನ್ನು ಚೆನ್ನಾಗಿ ಮಾಡಿರುವುದೇ ಅಲ್ಲದೆ ತಾವು ಮಾಡಿರುವ ಯಾವುದೇ ಕೆಲಸದ ಬಗ್ಗೆ ಜನರಿಗೆ ತಿಳಿಯ ಹೇಳುವ ಕೆಲಸವನ್ನೂ ತಮ್ಮ ಸರ್ಕಾರ ಅತ್ಯುತ್ತಮವಾಗಿ ಮಾಡುವಂತೆ ನೋಡಿಕೊಂಡಿದ್ದಾರೆ. ಇದು ಕಾಂಗ್ರೆಗಳಿಗೆ ನುಂಗಲಾರದ ತುತ್ತಾಗಿದೆ".

ಇನ್ನೊಂದು ಮಾತು ಕೇಳಿ

ಅಶೋಕ್ ಮಿತ್ರ ಹಣಕಾಸು ಸಚಿವರಾಗಿ ರಾಜಿನಾಮೆ ಕೊಟ್ಟದ್ದೇ ಜ್ಯೋತಿ ಬಸು ರಾಜ್ಯಭಾರದ ಏಕ ಮಾತ್ರ 'ಕ್ರೈಸಿಸ್' ಎನ್ನಬಹುದು ಕಮ್ಯೂನಿಸ್ಟರ ಶಿಸ್ತು ಎಂಥದ್ದೆಂದರೆ ಇಬ್ಬರಲ್ಲಿ ಯಾರೂ ಅದರ ಬಗ್ಗೆ ಹೆಚ್ಚಿಗೆ ಮಾತ ನಾಡಿಲ್ಲ. ವಾತಾವರಣವನ್ನು ಕೆಡಿಸಿಲ್ಲ. ಬೇರೆ ಯಾವ ಸರ್ಕಾರಕ್ಕೆ ಹೋಲಿಸಿದರೂ ಈ ಸರ್ಕಾರ ಕೆಟ್ಟ ಹೆಸರು ತೆಗೆದು ಕೊಳ್ಳುವಂತ ಸ್ಕ್ಯಾಂಡಲ್ಸ್(ಹಗರಣಗಳು) ಮಾಡಿಕೊಂಡಿಲ್ಲ.

ಒಂದು ಕಡೆ ಸುಭಾಷ್ ಘೀಸಿಂಗ್ ಎಂಬ ಘೂರ್ಖ ನಾಯಕನ ದಂಗೆಯನ್ನೂ ಇನ್ನೊಂದು ಕಡೆಯಿಂದ ಕಾಂಗ್ರೆಗಳ ಹೊಡೆತವನ್ನು ತಡೆದುಕೊಂಡು ಮೂರನೇ ಭಾರಿಗೆ ಬಂಗಾಳದಲ್ಲಿ ಸಿ.ಪಿ.ಐ. (ಎಂ) ಪಕ್ಷವನ್ನು ಮುಂಬರುವ ಚುನಾವಣೆಗಳಲ್ಲಿ ಜಯದತ್ತ ತೆಗೆದುಕೊಂಡು ಹೋಗುತ್ತಿದ್ದಾರೆ, ಜ್ಯೋತಿ ಬಸು.

ಎಡರಂಗ ಚುನಾವಣಾ ಪ್ರಣಾಳಿಕೆ

ದೇಶದ ಎಲ್ಲಾ ಜನರ ಹಿತ ಪ್ರತಿಪಾದನೆ

(4ನೇ ಪುಟದಿಂದ)

4ನೇ ಪುಟದಲ್ಲಿರುವ ಬಾಕ್ಸ್ ನೋಡಿ

ಪಶ್ಚಿಮ ಬಂಗಾಳ ಎಡರಂಗದ ಚುನಾವಣಾ ಪ್ರಣಾಳಿಕೆಯಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ವಿಂಗಡಿಸಿರುವ ಹತ್ತು ಅಂಶಗಳನ್ನು ನೋಡಿ. ಈ ದೇಶದ ಪ್ರತಿಯೊಬ್ಬ ಶ್ರೀಸಾಮಾನ್ಯನಿಗೆ, ಕಾರ್ಮಿಕನಿಗೆ ಗ್ರಾಮೀಣ ಬಡವನಿಗೆ ಸಂಬಂಧಿಸಿದ ಅಂಶ ಇವು. ಬೆಲೆ ಏರಿಕೆಯನ್ನು ತಡೆಗಟ್ಟಲು ಖೋತಾ ಬಜೆಟ್ ಕಡಿಮೆ ಮಾಡುವ ರಾಜ್ಯಗಳಲ್ಲಿ ಶಾಲೆ, ರಸ್ತೆ, ಸೇತುವೆ, ಆಸ್ಪತ್ರೆಗಳಾಗಲು, ನೀರಾವರಿ ಯೋಜನೆಗಳನ್ನು ಆರಂಭಿಸಲು ಬೇಕಾದ ಹಣಕ್ಕಾಗಿ ಕೇವಲ ಪ. ಬಂಗಾಳ ಸರ್ಕಾರಕ್ಕಲ್ಲ,ಇಡೀ ದೇಶಕ್ಕೆಲ್ಲಾ ಬೇಕಾದ ಹಣಕ್ಕಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ ಈ ಹತ್ತು ಅಂಶಗಳಲ್ಲಿ. ಈ ಪ್ರಣಾಳಿಕೆಯಂತೆ ಕೇಂದ್ರಸರ್ಕಾರದ ಮೇಲೆ ಒತ್ತಾಯ ಹೇರುವ ಒಂದೇ ಒಂದು ಅಂಶವನ್ನು ಬೇರೆ ರಾಜ್ಯಗಳಲ್ಲಿರುವ, ಕಾಂಗ್ರೆ ಸರ್ಕಾರಗಳಿರಲಿ ವಿರೋಧಪಕ್ಷಗಳ ಸರ್ಕಾರಗಳೂ ಜನರ ಬಳಿ ತೆಗೆದುಕೊಂಡು ಹೋದುದುಂಟೆ? ಈ ಚುನಾವಣೆಗಳ ಸಮಯದಲ್ಲಿ ಪ. ಬಂಗಾಳದ ಪ್ರತಿ ನಗರ, ಪಟ್ಟಣಗಳ ಪ್ರತಿ ಬೀದಿಗಳಲ್ಲಿ, ಪ್ರತಿ ಹಳ್ಳಿಯಲ್ಲಿ ಈ ಅಂಶಗಳು ಚರ್ಚೆಗೆ ಬರುತ್ತವೆ. ಕೇಂದ್ರ ಸರ್ಕಾರದ ಹೊಣೆ ಏನು ? ಎಂಬ ಬಗ್ಗೆ ಚರ್ಚೆ ನಡೆಯುತ್ತದೆ. ತಮ್ಮ ಹಳ್ಳಿಯ ಅಭಿವೃದ್ಧಿಯ ಬಗ್ಗೆ ಮಾತ್ರ ಅಲ್ಲ ಇಡೀ ದೇಶದ ಅಭಿವೃದ್ಧಿಯ ಬಗ್ಗೆ, ಅಲ್ಲಿನ ಜನ ಯೋಚಿಸಲಾರಂಭಿಸುತ್ತಾರೆ. ಎಡರಂಗಕ್ಕೆ ಹಾಕಿದ ಪ್ರತಿಯೊಂದು ಮತವೂ ಕರ್ನಾಟಕದ ಗ್ರಾಮೀಣ ಜನರ, ನಿರುದ್ಯೋಗಿಗಳ ಕಾರ್ಮಿಕರ ಜೀವನದ ಬಗ್ಗೆ ಸಾವಿರಾರು ಮೈಲಿ ದೂರದ ಬಾಂಧವನೊಬ್ಬ ವ್ಯಕ್ತ ಪಡಿಸಿದ ಕಾಳಜಿಯಾಗಿರುತ್ತದೆ. ಇದಕ್ಕಾಗಿಯೇ ಈ ಮತದಾರ ಜನತೆ, ಅವರ ನಾಯಕ, ಎಡರಂಗ ಇಡೀ ದೇಶದ ಜನತೆಯಮುಂಚೂಣಿ ಎನ್ನುವುದು.

ಇನ್ನು ಪ.ಬಂಗಾಳದ ಬಗ್ಗೆ ಅವರು ಹಾಕಿಕೊಂಡ ಕಾರ್ಯಕ್ರಮಗಳನ್ನು ನೋಡಿ. ಇಡೀ ರಾಜ್ಯದ ಜಲ ಸಂಪನ್ಮೂಲಗಳ ಬಳಕೆಯಿಂದ, ನೀರಾವರಿಯ ಪ್ರಮಾಣವನ್ನು ಶೇ. 60ಕ್ಕೆ ಹೆಚ್ಚಿಸುತ್ತಾರಂತೆ. ಕಲ್ಕತ್ತಾಕ್ಕೆ ದೂರ ದೂರ ಪ್ರದೇಶಗಳಲ್ಲಿ ಕೈಗಾರಿಕಾ ಕೇಂದ್ರಗಳ ಆರಂಭ ಹಾಗೂ ಆಗಲೇ ಆರಂಭಿಸಿರುವುದರ ಅಭಿವೃದ್ಧಿ. ಜನಸಾಮಾನ್ಯರಿಗೆ ಚಿಕಿತ್ಸಾ ಸೌಲಭ್ಯಗಳು ಆರೋಗ್ಯ ಸೇವೆಗಳಿಗೆ ಸಂಬಂಧ ಪಟ್ಟ ಎಲ್ಲ ಸಿಬ್ಬಂದಿಯಲ್ಲಿ ಶಿಸ್ತು, ಜನ ಸೇವೆಯ ಭಾವನೆಯನ್ನು ಮೂಡಿಸುವುದು.

ಮಹಿಳೆಯರ ವಿರುದ್ಧವಾದಎಲ್ಲಾರೀತಿಯ ಬೇಧ ಭಾವಗಳನ್ನು ದೂರಗೊಳಿಸುವುದು, ಮಹಿಳೆಯರ ಸಾಮಾಜಿಕ ಅಧಿಕಾರದ ರಕ್ಷಣೆ ಹಾಗೂ ವಿಸ್ತರಣೆ.

ಪ. ಬಂಗಾಳದ ಎಡರಂಗಕ್ಕೆ ಹಾಕಿದ ಪ್ರತಿ ಮತವೂ ಕರ್ನಾಟಕದ ಗ್ರಾಮೀಣ ಜನರ, ನಿರುದ್ಯೋಗಿಗಳ ಕಾರ್ಮಿಕರ ಜೀವನದ ಬಗ್ಗೆ ಸಾವಿರಾರು ಮೈಲಿ ದೂರದ ಬಾಂಧವನೊಬ್ಬ ವ್ಯಕ್ತಪಡಿಸಿದ ಕಾಳಜಿಯಾಗಿರುತ್ತದೆ.

ಸಣ್ಣ ಪ್ರಮಾಣದ ಎಲ್ಲಾ ಉತ್ಪಾದನಾರಂಗಗಳಲ್ಲಿ–ಸಣ್ಣ ಕೈಗಾರಿಕೆ, ಗುಡಿ ಕೈಗಾರಿಕೆ, ಕೃಷಿ, ಮೀನುಗಾರಿಕೆ, ಇತ್ಯಾದಿಗಳಲ್ಲಿ ಸಹಕಾರಿ ಸಂಘಗಳನ್ನು ವ್ಯಾಪಕ ಗೊಳಿಸುವುದು.

ಕೈಗಾರಿಕಾ ವಿವಾದಗಳ ಶೀಘ್ರಪರಿಹಾರ ಕನಿಷ್ಟ ಕೂಲಿ ಶಾಸನಗಳನ್ನು ಮಾಲೀಕರು ಪಾಲಿಸುವಂತೆ ಮಾಡುವುದು.

ಆಡಳಿತದ ಕುಂದು ಕೊರತೆಯನ್ನು ಆಡಳಿತದ ಪ್ರತೀ ಹಂತದಲ್ಲಿ ತಿಳಿದುಕೊಳ್ಳುವ ವ್ಯವಸ್ಥೆ ಮಾಡುವುದು.

ಇನ್ನು ಭಾಷೆಯ ಬಗ್ಗೆ ಬಹಳ ಜನರು ಮಾರ್ಕ್ಸ್‌ವಾದಿಗಳನ್ನು ದೂರುತ್ತಾರೆ. ಎಡರಂಗದ ಕಾರ್ಯಕ್ರಮ ನೋಡಿ :

ನ್ಯಾಯಾಂಗವೂ ಸೇರಿದಂತೆ ಆಡಳಿತದ ಎಲ್ಲಾ ರಂಗಗಳಲ್ಲಿ ಬಂಗಾಲಿ ಭಾಷೆಗೆ ಮಹತ್ವ.

ಗೂರ್ಖಾಗಳ ವಾಸ ಸ್ಥಾನವಾದ ಡಾರ್ಜಿಲಿಂಗ್‌ನಲ್ಲಿ ಕರ್ಸಿಯಾಂಗ್ ಕಾಲಿಂಪಾಂಗ್‌ಗಳಲ್ಲಿ ನೇಪಾಳಿ ಭಾಷೆಯೇ ಆಡಳಿತ ಭಾಷೆ.

ಉರ್ದು ಮಾತನಾಡುವ ಜನರೇ ಹೆಚ್ಚಿರುವ ಇಸ್ಲಾಂಪುರ, ಗಾರ್ಡನ್ ರೀಚ್, ಅಸ್ಸಾನ್‌ಸೋಲ್‌ಗಳಲ್ಲಿ ಉರ್ದು ಭಾಷೆಯ ಪ್ರಸಾರ. ಪ್ರತಿಯೊಬ್ಬರ ಮಾತೃ ಭಾಷೆಗೂ ಪ್ರಾಮುಖ್ಯತೆ ಹಾಗೂ ಮಹತ್ವ.

ಇನ್ನು ಪರಿಸರದ ಬಗ್ಗೆ ಪ. ಬಂಗಾಳದ ಕಾರ್ಯಕ್ರಮವನ್ನು ಪರಿಸರವಾದಿಗಳು ಹಾಗೂ ವಿಜ್ಞಾನಿಗಳು ಗಮನಿಸಬೇಕು :—

ಪರಿಸರ ಹಾಗೂ ಕೈಗಾರಿಕೀಕರಣದ ಸಮತೋಲವನ್ನು ಸ್ಥಾಪಿಸಲು ಪರಿಸರ ವಿಭಾಗವನ್ನುಬಲಪಡಿಸುವುದು, ರಾಜ್ಯದ ಅರಣ್ಯಗಳ ರಕ್ಷಣೆ ಇದು ಒಂದು ಕಡೆ. ಕೃಷಿ ಹಾಗೂ ಕೈಗಾರಿಕಾ ಅಭಿವೃದ್ಧಿಯಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರಯೋಜನ ಪಡೆಯಲು ಯೋಜನಾ ಮಂಡಳಿಯ ವಿಜ್ಞಾನಿಗಳು ಹಾಗೂ ತಂತ್ರಜ್ಞರ ಒಂದು ವಿಶೇಷಸಂಸ್ಥೆ ಮತ್ತೊಂದು ಕಡೆ

ಹೀಗೆ ಪ. ಬಂಗಾಳದ ಚುನಾವಣಾ ಪ್ರಣಾಳಿಕೆ ಇಡೀ ದೇಶದ ಬಡ ಜನತೆಗೆ ಆಶಾಕಿರಣವಾಗಿದೆ. ಈ ಬೆಳಕು ನಮ್ಮ ರಾಜ್ಯದ ಬಡಜನರಿಗೂ ಕಾಣಿಸಬೇಕು. ಈ ಕೆಲಸವನ್ನುಬಂಡವಾಳಶಾಹಿ, ಪುಟ್ಟ ಬಂಡವಾಳಶಾಹಿ ಪತ್ರಿಕೆಗಳು ಮಾಡಲಾರವು. ಇನ್ನು ಆಕಾಶವಾಣಿ ದೂರದರ್ಶನಗಳು ಮಾಡುತ್ತವೆಯೇ? ಖಂಡಿತ ಇಲ್ಲ. ಮತ್ತೆ ಯಾರು ಮಾಡಬೇಕು. ಮತ್ತೊಮ್ಮೆ ಒತ್ತಿಹೇಳಬೇಕಾಗಿದೆ. ಮಾಡಬೇಕಾದವರು ನಾವು–ನೀವು, ದುಡಿಯುವ ಜನ, ದುಡಿಯುವ ಜನರ ಸಂಘಟನೆಗಳಲ್ಲಿ, ವಿದ್ಯಾರ್ಥಿ, ಯುವ ಜನರ ಸಂಘಟನೆಗಳಲ್ಲಿ ದುಡಿಯುವವರು. ●

ಧೃಡಗೊಳ್ಳುತ್ತಿರುವ ಎಡರಂಗ

(4ನೇ ಪುಟದಿಂದ)

ಗಿದೆ- ದುಡಿಯುವ ಜನರ ಆಶೋತ್ತರಗಳ ಪ್ರತೀಕವಾಗಿ ಬೆಳೆದು ನಿಂತಿದೆ.

1977ರ ನಂತರ

ವಿಷಮ ಪರಿಸ್ಥಿತಿಯ ಅಂತ್ಯದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) ಜನತಾ ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಂಡು ಕೆಲವು ಸ್ಥಾನಗಳನ್ನು ಜನತಾಕ್ಕೆ ಬಿಟ್ಟುಕೊಡಬೇಕಾಯಿತಾದರೂ ಅದು ಅಭೂತಪೂರ್ವ ಗೆಲುವು ಸಾಧಿಸಿತು. ಆ ನಂತರ ನಡೆದ ವಿಧಾನಸಭಾ ಚುನಾವಣೆಗಳಲ್ಲಿ 297 ಸ್ಥಾನಗಳ ಪೈಕಿ ಸಿ. ಪಿ. ಐ. (ಎಂ) ಒಂದೇ 177 ಸ್ಥಾನಗಳಿಸಿ ರಾಜ್ಯ ವಿಧಾನ ಮಂಡಳದಲ್ಲಿ ಪ್ರಮುಖ ಸ್ಥಾನ ಪಡೆಯಿತು. ವಿಧಾನ ಸಭಾ ಚುನಾವಣೆಗಳ ಬೆನ್ನಹಿಂದೇ ನಡೆದ ಪಂಚಾಯತ್ ಚುನಾವಣೆಗಳಲ್ಲಿ ಒಟ್ಟು 56,000 ಸ್ಥಾನಗಳ ಪೈಕಿ ಎಡರಂಗಕ್ಕೆ 38, 468 ಸ್ಥಾನಗಳು ಲಭಿಸಿದರೆ ಸಿ. ಪಿ. ಐ. [ಎಂ] ಒಂದೇ 34,445 ಸ್ಥಾನಗಳಲ್ಲಿ ಜಯಗಳಿಸಿತು.

ಲೋಕಸಭೆಗೆ ಜನವರಿ 1980ರಲ್ಲಿ ನಡೆದ ಮಧ್ಯಾವಧಿ ಚುನಾವಣೆಯಲ್ಲಿ ಒಟ್ಟುಮತಗಳ ಶೇ. 54ರಷ್ಟು ಅಂದರೆ ಒಂದುಕೋಟಿ ಹತ್ತುಲಕ್ಷಕ್ಕೂ ಹೆಚ್ಚಿನ ಮತಗಳು ಎಡರಂಗಕ್ಕೆ ದೊರೆತವು. ಇದರಲ್ಲಿ ಸಿ. ಪಿ. ಐ. [ಎಂ]ನ ಪಾಲು 82 ಲಕ್ಷ ಅಂದರೆ ಒಟ್ಟು ಚಲಾಯಿಸಲಾದ ಮತಗಳಲ್ಲಿ ಶೇ. 40ರಷ್ಟು. ಈ ನಡುವೆ 1977ರಲ್ಲಿ ಶೇಕಡ 30.2 ಮತಗಳಿಸಿದ್ದ ಕಾಂಗ್ರೆಸ್ [ಐ] 1980ರಲ್ಲಿ ತನ್ನ ಮತಗಳ ಪ್ರಮಾಣವನ್ನು 36. 50%ಕ್ಕೆ ಏರಿಸಿಕೊಂಡಿದ್ದಕ್ಕೆ 1977ರಲ್ಲಿ ಸಾಕಷ್ಟು ಮತಗಳಿಸಿದ್ದ ಕಾಂಗ್ರೆಸ್ [ಯು] ಮತ್ತು ಜನತಾ ಪಕ್ಷಗಳು ಧೂಳೀಪಟವಾಗಿ ಅವುಗಳ ಪಾಲಿನ ಮತಗಳು ಕಾಂಗ್ರೆಸ್ [ಐ]ಗೆ ಹೋದುದೇ ಕಾರಣ.

ಮೇ 1981ರಲ್ಲಿ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ಸಿ. ಪಿ. ಐ. [ಎಂ] 33.5% ರಷ್ಟು ಮತಗಳಿಸಿದೆ. ಅರವತ್ತೆಂಟು ನಗರ ಸಭೆಗಳಲ್ಲಿ ಎಡರಂಗ ಅಧಿಕಾರಕ್ಕೆ ಬಂದರೆ ಎಡರಂಗದ 977 ಸ್ಥಾನಗಳಲ್ಲಿ ಸಿ. ಪಿ. ಐ. [ಎಂ]ನ ಪಾಲು 697.

ರಾಜ್ಯವಿಧಾನ ಸಭೆಗೆ ಮಾರ್ಚ್ 1982ರಲ್ಲಿ ನಡೆದ ಚುನಾವಣೆಯಲ್ಲಿ ಎಡರಂಗವು ಮೂರನೇ ಎರಡಂಶ. ಬಹು ಮತಗಳಿಸಿ ಅಧಿಕಾರಕ್ಕೆ ಬಂದಿದೆ. ವಿಧಾನ ಸಭೆಯ 294 ಸ್ಥಾನಗಳಲ್ಲಿ ಎಡರಂಗಕ್ಕೆ 238 ಸ್ಥಾನಗಳೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ 174 ಸ್ಥಾನಗಳೂ ದೊರಕಿವೆ. ಚಲಾಯಿಸಲಾದ ಒಟ್ಟು ಮತಗಳಲ್ಲಿ ಶೇ. 52.7 ಮತಗಳು ಎಡರಂಗಕ್ಕೆ ದೊರತಿವೆ. ಇದಾದ ಮೇಲೆ ನಡೆದ ಪಂಚಾಯತ್ ಚುನಾವಣೆಗಳಲ್ಲಿ ಎಡರಂಗಕ್ಕೆ ಶೇಕಡಾ 66.8 ಸ್ಥಾನಗಳೂ ಸಿ.ಪಿ.ಐ. (ಎಂ) ಗೆ ಶೇ. 60.1ಸ್ಥಾನಗಳೂ ಲಭಿಸಿವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ರಾಜ್ಯದ ಜನತೆಯ ನಡುವೆ ಸಾಕಷ್ಟು ಆಳವಾಗಿ ಬೇರು ಬಿಟ್ಟಿದೆಯೆನ್ನುವುದನ್ನು ಈ ಎರಡೂ ಚುನಾವಣೆಗಳು ತೋರಿಸಿಕೊಟ್ಟವೆ. 1984ರಲ್ಲಿ ಇಂದಿರಾಗಾಂಧಿಯವರ ಹತ್ಯೆಯಾದ ಬಳಿಕ ವಿಶೇಷ ಸನ್ನಿವೇಶದಲ್ಲಿ ಲೋಕಸಭಾ ಚುನಾವಣೆಗಳು ನಡೆದವು ಕಾಂಗ್ರೆಸ್ (ಐ) ಪರವಾಗಿ ಅನುಕಂಪದ ಅಲೆ ಆಗ ಜೋರಾಗಿ ಬೀಸುತ್ತಿತ್ತು. ಆದರೂ ಎಡರಂಗ 42 ಸ್ಥಾನಗಳ ಪೈಕಿ 26ರಲ್ಲೂ ಸಿ.ಪಿ.ಐ (ಎಂ) ಹದಿನೆಂಟು ಸ್ಥಾನಗಳಲ್ಲೂ ಗೆಲ್ಲಲು ಶಕ್ತವಾದವು. ಇಂತಹ ಅನುಕಂಪದ ಅಲೆ ಪ್ರಬಲವಾಗಿದ್ದಾಗಲೂ ಎಡರಂಗ ಶೇ. 48.43 ರಷ್ಟು ಮತಗಳಿಸಿದೆ. ಇಡೀ ದೇಶದಲ್ಲೇ ಕಾಂಗ್ರೆಸ್ (ಐ) ಜಯಭೇರಿ ಹೊಡೆಯುವಂತೆ ಮಾಡಿದ ಅನುಕಂಪದ ಅಲೆಗೆ ಪ್ರಬಲವಾದ ತಡೆಯೊಡ್ಡಿದ್ದು ಪ. ಬಂಗಾಳವೊಂದೇ.

ಹಾಗಿದ್ದರೂ ಈ ಚುನಾವಣೆಯ ಫಲಿತಾಂಶವನ್ನು ವಿವರವಾದ ವಿಶ್ಲೇಷಣೆಗೆ ಗುರಿಪಡಿಸಿರುವ ಪ. ಬಂಗಾಳದ ರಾಜ್ಯ ಸಮಿತಿ ಪಕ್ಷದ ಸಂಘಟನೆಯಲ್ಲಿರಬಹುದಾದ ದೌರ್ಬಲ್ಯಗಳನ್ನು ನಿವಾರಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಂಡಿದೆ. ಪಕ್ಷದ ರಾಜ್ಯ ಸಮ್ಮೇಳನ ಅಂಗೀಕರಿಸಿದ್ದ ವರದಿಯ ಪ್ರಕಾರ ಪ. ಬಂಗಾಳದ ಶೇ. 35ರಷ್ಟು ಜನ ಎಡರಂಗ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಟ್ಟಾ ಬೆಂಬಲಿಗರು. ಶೇ. 30ರಷ್ಟು ಜನ ಕಾಂಗ್ರೆಸ್ (ಐ) ಯನ್ನು ಬೆಂಬಲಿಸುತ್ತಾರೆ. ಉಳಿದ ಶೇ. 30 ರಷ್ಟು ಮಂದಿ ಯಾವ ಕಡೆಗೂ ಇಲ್ಲ; ಮತ್ತು ಇದರಲ್ಲಿ ಶೇ. 10 ರಷ್ಟು ಮಂದಿ ಮಾತ್ರ ಮತ ಚಲಾಯಿಸುತ್ತಾರೆ. ಪಕ್ಷವು ಈ ಜನ ವಿಭಾಗದ ಜೊತೆಗೂ ನಿಕಟ ಸಂಪರ್ಕ ಬೆಳೆಸಿ ಅವರ ಪ್ರಜ್ಞೆಯ ಮಟ್ಟವನ್ನು ಎತ್ತರಕ್ಕೆ ಕೊಂಡೊಯ್ಯಬೇಕೆಂದೂ ಅವರ ಬೆಂಬಲವನ್ನು ಗಳಿಸಿಕೊಳ್ಳಬೇಕೆಂದು ಪಕ್ಷದ ರಾಜ್ಯ ಸಮ್ಮೇಳನ ತೀರ್ಮಾನಿಸಿದೆ. ಕಳೆದ ಹತ್ತು ವರ್ಷಗಳ ಕಾಲ ಎಡರಂಗ ಸರಕಾರ ಮತ್ತು ವಿಶೇಷವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಡೆಸಿದ ರಚನಾತ್ಮಕ ಕೆಲಸಗಳ ಫಲವಾಗಿ 1987ರ ವಿಧಾನ ಸಭಾ ಚುನಾವಣೆಯಲ್ಲೂ ಎಡರಂಗ ಜಯಭೇರಿ ಬಾರಿಸುವುದು ಬಹುತೇಕ ಖಚಿತವೆಂದು ಬಂಡವಾಳಶಾಹಿ ಪತ್ರಿಕೆಗಳೇ ಅನಿವಾರ್ಯವಾಗಿ ಘೋಷಿಸಬೇಕಾಗಿ ಬಂದಿದೆ.

ಸಂತಾಪ

ಮಂಗಳೂರು ತಾಲ್ಲೂಕಿನ ಖಡಗುಳಿಪಾಡಿ ಗ್ರಾಮದ 60 ವರ್ಷ ಪ್ರಾಯದ ನೊಕಾಮೂಲ್ಯ ರವರು ಅನಾರೋಗ್ಯ ನಿಮಿತ್ತ ಜನವರಿ 7 ರಂದು ನಿಧನಹೊಂದಿದ್ದಾರೆ. ಶ್ರೀಯುತರು 1969 ರಿಂದ ಪಕ್ಷದ ಸದಸ್ಯರಾಗಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು ಇತ್ತೀಚೆಗೆ ಅನಾರೋಗ್ಯದಿಂದ ಬಳಲುತ್ತಿದ್ದರು. ಇವರು ಪಕ್ಷದ ಹಿತೈಷಿಯಾಗಿ ಪಕ್ಷದ ಕಾರ್ಯಕ್ರಮಗಳಿಗೆ ಎಲ್ಲಾ ರೀತಿಯ ಸಹಾಯ ಮಾಡುತ್ತಿದ್ದರು. ಶ್ರೀಯುತರ ನಿಧನಕ್ಕೆ ಸಿ.ಪಿ.ಐ. [ಎಂ] ಪಕ್ಷದ ಮಳಲಿ ಶಾಖೆಯು ತಾ. 11-1-87 ರಂದು ಸಭೆ ಸೇರಿ ಸಂತಾಪ ವ್ಯಕ್ತಪಡಿಸಿದೆ.

'ಲೋಹಿಯವಾದ' : ವಿಮರ್ಶೆ

(2ನೇ ಪುಟದಿಂದ)

ಬಗ್ಗೆ ಅವರೇ ಮಾಡಿದ Post-mortem. ಈ ಗೊಂದಲ ಲೋಹಿಯಾವಾದದ Stagnation ನ್ನು ಅದರ ವರ್ಗ ನೆಲೆಗಳಿಂದ ಅರ್ಥಮಾಡಿಕೊಳ್ಳಲಾಗದ, ಮಾರ್ಕ್ಸ್‌ವಾದದ ತಿರುಳನ್ನು ಅರಗಿಸಿಕೊಳ್ಳಲಾಗದ ಪರಿಸ್ಥಿತಿಯಿಂದ ಉದ್ಭವವಾದದ್ದು. ಲೋಹಿಯಾವಾದವನ್ನು ಎತ್ತಿಹಿಡಿಯುತ್ತಿದ್ದಂತೆಯೇ ಅದರಿಂದ ಭ್ರಮನಿರಸನಗೊಳ್ಳುವ ವಾಸ್ತವತೆಯನ್ನು ಎದುರಿಸುವ ಪರಿಸ್ಥಿತಿ. ಒಟ್ಟಾರೆ ತೋಳ್ಪಾಡಿಯವರು ಪ್ರಬಂಧದಲ್ಲಿ ತೋರಿಸುವ ತಾಕಲಾಟಗಳು ವಿಫಲವಾದ ಮೊದಲು ಪ್ರೇಮಿಸಿ ನಂತರ ಭ್ರಮ ನಿರಸನಗೊಂಡವರ ಹಳಹಳಿಕೆಯಂತೆಒಪ್ಪಿಕೊಳ್ಳಲಾಗದ ಅದರೆ ಸ್ವೀಕರಿಸಲೇಬೇಕಾದ ವಾಸ್ತವತೆಯಂತೆ

ಒಟ್ಟಾರೆ ಹೇಳುವುದಾದರೆ ಈ ಪ್ರಬಂಧದ ಉದ್ದೇಶ ಮೊದಲ ನೋಟಕ್ಕೆ ಕಾಣುವಂತೆ ಲೋಹಿವಾದವನ್ನು ಮಾರ್ಕ್ಸ್‌ವಾದಿ ನೆಲೆಯಿಂದ ವಿಮರ್ಶೆಯ ಬದಲು, ಮಾರ್ಕ್ಸ್‌ವಾದವನ್ನು ಲೋಹಿಯೂವಾದಿ (ಅಥವಾ ಅದರ ಇತರ ಹತ್ತಿರದಸಂಬಂಧೀ ಸೈದ್ಧಾಂತಿಕ ನೆಲೆಗಳಿಂದ ಮಾಡಿದ ವಿಮರ್ಶೆ. ●

ಸಂತಾಪ ಸೂಚನೆ

ಮೈಸೂರಿನ ಅರಮನೆ ಕಾರ್ಮಿಕರ ಸಂಘದ ಮುಖಂಡರಾಗಿದ್ದ ಹಾಗು ಸಿ. ಪಿ. ಐ. [ಎಂ] ಪಕ್ಷದ ಹಿತೈಷಿಗಳೂ ಆಗಿದ್ದ ಹನುಮಂತಪ್ಪನವರು ಜನವರಿ 9 ರಂದು ಮೈಸೂರಿನಲ್ಲಿ ನಿಧನರಾದರು. ಇವರ ಕುಟುಂಬಕ್ಕೆ ಪಕ್ಷದ ಪ್ರಾದೇಶಿಕ ಸಮಿತಿ ತನ್ನ ಸಂತಾಪವನ್ನು ಸಲ್ಲಿಸಿದೆ.

ಭಾರತವು ಸಂಪೂರ್ಣ ಸಾರ್ವಭೌಮ ಪ್ರಜಾಸತ್ತಾತ್ಮಕ ಜಾತ್ಯಾತೀತ ಸಮಾಜವಾದಿ ಗಣರಾಜ್ಯದ ದಿನ ಜನವರಿ 26, 1950.

ಗ್ರಾಮಸಭೆ ಮತ್ತು ಜಿಲ್ಲಾ ಪರಿಷತ್ತುಗಳನ್ನು ರಚಿಸಿರುವ ಕರ್ನಾಟಕ ರಾಜ್ಯ ಸರಕಾರ ಜನತೆಗೆ ಅಧಿಕಾರ ನೀಡುವ ಹೊಸ ಹೆಜ್ಜೆಯ ಮೂಲಕ ಸಂವಿಧಾನದ ಕನಸುಗಳಲ್ಲೊಂದನ್ನು ನನಸಾಗಿಸಿದೆ.

1983ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಹೊಸ ಸರಕಾರ ಜನತೆಯ ಆಶೋತ್ತರಗಳನ್ನು ಈಡೇರಿಸಲು ಕಂಕಣ ಬದ್ಧವಾಯಿತು. ಜನ ಸಮುದಾಯದ ಜೀವನ ಮಟ್ಟ ಸುಧಾರಿಸಿ ಸಮೃದ್ಧಿ ಮತ್ತು ಸಂತಸವನ್ನು ತಂದುಕೊಡುವ ದಿಸೆಯಲ್ಲಿ ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡಿತು.

ಜನತೆಗೆ ಅಧಿಕಾರ

ಪ್ರಜಾಪ್ರಭುತ್ವದಲ್ಲಿ "ಪ್ರಜೆಯೇ ಪ್ರಭು" ಎಂಬ ತತ್ವದಲ್ಲಿ ಅಚಲವಾದ ನಂಬಿಕೆ ಇಟ್ಟಿರುವ ಕರ್ನಾಟಕ ಸರಕಾರ, ಪ್ರಜಾಪ್ರಭುತ್ವ ಅರ್ಥಪೂರ್ಣವಾಗಬೇಕಾದರೆ ಆಡಳಿತದಲ್ಲಿ ಜನತೆಯ ಸಕ್ರಿಯ ಪಾತ್ರ ಅತ್ಯಂತ ಅಗತ್ಯ ಎಂಬುದನ್ನು ಮನಗಂಡಿದೆ.

ಇದಕ್ಕೆ ಮುಖ್ಯವಾಗಿ ಬೇಕಾದದ್ದು ಅಧಿಕಾರ ವಿಕೇಂದ್ರಿಕರಣ. ಆದ್ದರಿಂದಲೇ ಪಂಚಾಯತಿ ರಾಜ್ಯ ಸಂಸ್ಥೆಗಳನ್ನು ರಚಿಸಿ, ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆ ನೇರವಾಗಿ ಪಾಲುಗೊಳ್ಳುವ ವ್ಯಾಪಕ ಅವಕಾಶಗಳನ್ನು ಕಲ್ಪಿಸಿದೆ.

ಈ ಗುರಿ ಸಾಧನೆಗಾಗಿ ಎರಡು ಪ್ರಮುಖ ಚುನಾವಣಾ ಸುಧಾರಣೆಗಳನ್ನು ಕಾರ್ಯಗತಗೊಳಿಸಲಾಗಿದೆ. ಮೊದಲನೆಯದು ; ಯುವ ಸಮೂಹ ಸಾರ್ವಜನಿಕ ವಿಚಾರಗಳಲ್ಲಿ ತನ್ನ ಅಭಿಮತ ವ್ಯಕ್ತ ಪಡಿಸಲು ಅನುಕೂಲವಾಗುವಂತೆ ಮತದಾನದ ವಯೋಮಿತಿಯನ್ನು 18 ವರ್ಷಗಳಿಗೆ ಇಳಿಸಿರುವುದು. ಎರಡನೆಯದು ; ಈ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 20 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಟ್ಟಿರುವುದು. ಇದರಿಂದ ಮಹಿಳೆಯರು ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಹೆಚ್ಚಿನ ಪಾತ್ರ ವಹಿಸಲು ನೆರವಾಗಿದೆ.

ಈಗ ಪಂಚಾಯತಿ ರಾಜ್ಯ ವ್ಯವಸ್ಥೆಯ ಮೊದಲ ವರ್ಷವೇ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳಿಗೆ 900 ಕೋಟಿ ರೂಪಾಯಿಗಳನ್ನು ಸರಕಾರ ನೀಡುತ್ತದೆ.

ಪಂಚಾಯಿತಿ ರಾಜ್ಯ ವ್ಯವಸ್ಥೆಯ ಅನುಷ್ಠಾನದಿಂದ ರಾಜ್ಯದಲ್ಲಿ 2469 ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದಿದ.

ಈ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಪ್ರಗತಿಪರ ಕಾರ್ಯಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಹಿರಿಯ ಹೊಣೆ ಹೊತ್ತಿವೆ. ಈ ಮಂಡಲ ಪಂಚಾಯಿತಿಗಳು ತಮ್ಮ ಜಿಲ್ಲಾ ಪರಿಷತ್ತುಗಳೇ ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಕಾರ್ಯನಿರ್ವಹಿಸುವ ಮೂಲ ಘಟಕಗಳು.

ಪ್ರಥಮ ಬಾರಿಗೆ ಸಮನಾದ ಪ್ರಾಥಮಿಕ ಹಂತದಿಂದ ಸುಮಾರು 56,000 ಪ್ರಜಾಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಇದರಲ್ಲಿ 29,051 ಜನ ಸಾಮಾನ್ಯ ವರ್ಗದ ಪ್ರತಿನಿಧಿಗಳು, 11,887 ಜನ ಪರಿಶಿಷ್ಟ ಜನಾಂಗದಪ್ರತಿನಿಧಿಗಳು ಹಾಗೂ 14356 ಮಹಿಳಾ ಪ್ರತಿನಿಧಿಗಳಿದ್ದಾರೆ. ಮಹಿಳೆಯರಲ್ಲಿ 2469 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು. ಇದರ ಜೊತೆಗೆ ಜಿಲ್ಲಾ ಪರಿಷತ್ತುಗಳಿಗೆ 887 ಸದಸ್ಯರು ಆಯ್ಕೆಯಾಗಿದ್ದಾರೆ.

1987 ರ ಜನವರಿ 2 ಮತ್ತು 20 ರಂದು ನಡೆದ ಚರಿತ್ರಾರ್ಹ ಚುನಾವಣೆಗಳಲ್ಲಿ 1, 82, 18, 177. ಜನ ಮತದಾರರು ಮತ ಚಲಾಯಿಸಿ ತಮ್ಮ ಪಕ್ವ ಅಭಿಮತ ವ್ಯಕ್ತಪಡಿಸಿದ್ದಾರೆ.

ಪ್ರಜಾಪ್ರಭುತ್ವದ ಮೂಲ ಈ ಹೆಮ್ಮೆಯ ನಾಡಿನ ಮಣ್ಣಿನ ಮಕ್ಕಳಲ್ಲಿ ಅಡಗಿದೆ ಎಂಬುದನ್ನು ಶೃತಪಡಿಸುವ ಕರ್ನಾಟಕದ ಜನ ಸಮುದಾಯ ನಿಜಕ್ಕೂ ಅಭಿನಂದನಾರ್ಹರು.

– ಕರ್ನಾಟಕ ವಾರ್ತೆ

ರಾಜ್ಯದ ಪ್ರಗತಿ ಮತ್ತು ಸಮೃದ್ಧಿಯ – ಕರ್ನಾಟಕ ಸರ್ಕಾರ

ಭಾರತೀಯ ಜನತಾ ಪಕ್ಷ

(1ನೇ ಪುಟದಿಂದ)

ಸಿಖ್‌ರಲ್ಲಿ ಮೂಲಭೂತವಾದ ತಲೆ ಎತ್ತಿದೆ. ಕಾಂಗ್ರೆಯ ಒಪ್ಪಂದದ ನೀತಿಯಿಂದಾಗಿ ಜಾತ್ಯತೀತತೆಯು ನೈಲಿಯ ಹಿಂದೆ ಬಿದ್ದು ದೇಶದಲ್ಲಿ ಜಾತಿಯತೆ ನಿರ್ದಿಷ್ಟ ರೂಪ ತಾಳುತ್ತಿದೆ. ಅದು ಬಿ. ಜೆ. ಪಿ. ಗೆ ಅನುಕೂಲವಾಗಿದೆ. ಆ ಕಾರಣದಿಂದಲೇ ಅದು ಪಂಜಾಬ್ ಒಪ್ಪಂದದಂಥ ಪ್ರಶ್ನೆ ಕುರಿತು ಒಂದೊಂದು ರಾಜ್ಯದಲ್ಲಿ ಒಂದೊಂದು ನಿಲುವು ತಾಳುತ್ತಿದೆ.

ಜನವರಿ ಮೊದಲವಾರದಲ್ಲಿ ಬಿ. ಜೆ. ಪಿ. ಯ ರಾಷ್ಟ್ರೀಯ ಕೌನ್ಸಿಲ್ ಸಭೆಯಲ್ಲಿ ದೇಶದ ರಾಜಕಾರಣಕ್ಕೆ ಸಂಬಂಧಪಟ್ಟ ಕೆಲವು ನಿರ್ಣಯಗಳನ್ನ ಕೈಗೊಂಡಿದೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಹಾಗೂ ಅನಂತರ ಅಧ್ಯಕ್ಷೀಯ ಮಾದರಿಯ ಸರಕಾರವನ್ನು ಅದು ವಿರೋಧಿಸುತ್ತಬಂದಿದ್ದರೂ ಈಗ ಅಧ್ಯಕ್ಷೀಯ ಮಾದರಿಯನ್ನು ಅಭ್ಯಸಿಸಲು ಸಂವಿಧಾನಕ್ಕೆ ಒಂದು ಕಮಿಶನನ್ನು ನೇಮಿಸಬೇಕೆಂಬ ನಿರ್ಣಯ ಒಂದು. ಈಗಿರುವಂಥ ಚುನಾವಣಾ ಪದ್ಧತಿ ಇರಬೇಕೇ, ರಾಜಕೀಯ ಪಕ್ಷಗಳು ಪಡೆದ ಮತಗಳ ಆಧಾರದಲ್ಲಿ ಸದಸ್ಯರ ಸಂಖ್ಯೆ ನಿರ್ಣಯಿಸಲ್ಪಡಬೇಕೇ ಅಥವಾ ಎರಡೂ ಸೇರಿದಂಥ ಪದ್ಧತಿ ಇರಬೇಕೇ, ಅಭಿವೃದ್ಧಿ ಮತ್ತು ಆಡಳಿತೆಯ ದೃಷ್ಟಿಯಿಂದ ರಾಜ್ಯಗಳನ್ನು ವಿಂಗಡಿಸಬೇಕೇ ಎಂಬುದನ್ನು ಆ ಕಮಿಶನ್ ವಿಚಾರಿಸಬೇಕು. ಎರಡನೆಯದಾಗಿ ಪಂಜಾಬಿನಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತೆ ಹೇರಿ ಸೈನ್ಯಸ್ಥಾಪಿಸಿ, ರಕ್ಷಣಾಗಡಿ ನಿರ್ಮಿಸಬೇಕು. ಭಯೋತ್ಪಾದಕರನ್ನು ಯಾವ ರೀತಿ ಪ್ರತ್ಯೇಕಿಸಬೇಕು. ಅವರನ್ನು ಎದುರಿಸಬೇಕು, ಅಲ್ಪಸಂಖ್ಯಾತ ಮತಸ್ಥರಲ್ಲಿ ವಿಶ್ವಾಸ ಯಾವ ರೀತಿ ಹುಟ್ಟಿಸಬೇಕು, ಅವರ ಜೀವ-ಆಸ್ತಿ ಯಾವ ರೀತಿ ರಕ್ಷಿಸಬೇಕು, ಛಿದ್ರಕಾರಿಗಳ ವಿರುದ್ಧ ಹೋರಾಡಲು ಸಿಖ್ ಜನರನ್ನು ಯಾವ ರೀತಿ ತಯಾರು ಗೊಳಿಸಬೇಕು ಎಂಬುದರ ಕುರಿತು ಬಿ.ಜೆ.ಪಿ. ಏನೂ ಅಭಿಪ್ರಾಯ ವ್ಯಕ್ತ ಮಾಡಿಲ್ಲ. ಪಂಜಾಬಿನಲ್ಲಿ ಜಾತೀಯವಾದ ಬಲಗೊಳ್ಳಬೇಕೆಂಬ ಸಾಮ್ರಾಜ್ಯಶಾಹಿಗಳ ವಿಚಾರಕ್ಕೆ ಬಿ. ಜೆ. ಪಿ. ನಿರ್ಣಯ ಸಹಾಯ ಮಾಡುತ್ತದೆ.

ಮೂರನೆಯದಾಗಿ ಸಿ.ಪಿ.ಐ.(ಎಂ) ಮೇಲೆ ತೀವ್ರ ಟೀಕೆ ಮಾಡಿದೆ. ಕಮ್ಯುನಿಸ್ಟರ ಜೊತೆಯಲ್ಲಿ ಯಾವುದೇ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲೆಂದು ಹೇಳಿದ್ದಲ್ಲದೆ, ತಮ್ಮ ಮತ ಹೆಚ್ಚಿಸಿಕೊಳ್ಳಲು ಬಂಗ್ಲಾ ದೇಶದ ಜನ ಭಾರತ ದೇಶದೊಳಗೆ ಬರುವುದನ್ನು ಪ್ರೋತ್ಸಾಹಿಸುತ್ತಿದ್ದಾರೆಂದು ಆರೋಪಿಸಿದ್ದಾರೆ. ಬೇರೆ ಯಾವ ರಾಜಕೀಯ ಪಕ್ಷವೂ ಅಂಥ ಆರೋಪ ಹೊರಿಸುವ ಧೈರ್ಯ ಮಾಡಿಲ್ಲ. ಕಾರ್ಮಿಕ ವರ್ಗಕ್ಕೆ, ಕೃಷಿ ಕಾರ್ಮಿಕರಿಗೆ, ರೈತರಿಗೆ, ನೌಕರರಿಗೆ ಹಾಗೆಯೇ ಇತರ ದುಡಿಯುವ ವರ್ಗದ ಸಲುವಾಗಿ ಕೆಲಸ ಮಾಡಿದ್ದರಿಂದಲೇ ಪಶ್ಚಿಮ ಬಂಗಾಲದಲ್ಲಿ ಸಿ. ಪಿ. ಐ. (ಎಂ) ಬೆಂಬಲ ಪಡೆದಿದೆಯಲ್ಲದೆ ಅನಧಿಕೃತವಾಗಿ ದೇಶದೊಳಗೆ ಬಂದಿರುವ ಜನರಿಂದಲ್ಲ ಎಂಬ ಸಂಗತಿ ಎಲ್ಲರಿಗೂ ಗೊತ್ತು. ಜಾತೀಯವಾದಿ-ಪ್ರತಿಗಾಮಿಗಳ ಕುರಿತು ಸಿ. ಪಿ. ಐ. (ಎಂ) ಕಠೋರ ನಿಲುವು ತಾಳಿರುವುದರಿಂದ, ಅದೂ ತನ್ನ ಪ್ರಥಮ ಶತ್ರು ಎಂದು ಬಿ.ಜೆ.ಪಿ. ಪರಿಗಣಿಸುತ್ತಿದೆ.

ಅಣು ಯುದ್ಧದ ವಿರುದ್ಧ ಜಗತ್ತಿನಾದ್ಯಂತ ನಡೆಯುತ್ತಿರುವ ಚಳುವಳಿ, ಅಪಾರ್ಥಿಡ್ ವಿರುದ್ಧ ಆಫ್ರಿಕದ ಜನತೆ ನಡೆಸುತ್ತಿರುವ ಹೋರಾಟ, ನಿಕರಾಗುವದ ಸ್ವಾತಂತ್ರ್ಯವನ್ನು ಕಬಳಿಸುವ ಅಮೇರಿಕನ್ ಸಾಮ್ರಾಜ್ಯಶಾಹಿಯ ಕುಟಿಲ ನೀತಿ, ಭಾರತಕ್ಕೆ ಸೋವಿಯತ್ ಕಮ್ಯುನಿಸ್ಟ ಪಾರ್ಟಿಯ ಕಾರ್ಯದರ್ಶಿ ಗೊರ್ಬೊಚೆವ್ ಅವರ ಸಂದರ್ಶನ, ಈ ಮಹತ್ವದ ವಿಷಯಗಳ ಕುರಿತು ಬಿ. ಜೆ. ಪಿ. ನ್ಯಾಷನಲ್ ಕೌನ್ಸಿಲ್ ಏನೂ ಅಭಿಪ್ರಾಯ ವ್ಯಕ್ತ ಮಾಡಿಲ್ಲ. ಅಷ್ಟೇ ಅಲ್ಲದೆ ಹರಾರೆ ಶೃಂಗ ಸಭೆ ಭಾರತದ ತಟಸ್ಥ ನೀತಿ ತಟಸ್ಥ ರಾಷ್ಟ್ರಗಳ ಚಳುವಳಿಗಳ ಕುರಿತೂ ಅದು ಮೌನ ತಾಳಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಬಹುಶಃ ಅವು ಒಪ್ಪಿಗೆಯಾಗಲಿಕ್ಕಿಲ್ಲೆಂದು ತಿಳಿದೇ ಆ ವಿಷಯಗಳನ್ನ ಬಿಟ್ಟಿರಬೇಕು ಇವನ್ನೆಲ್ಲಾ ನೋಡುವಾಗ ಬಿ. ಜೆ. ಪಿ. ತನ್ನ ಸೋಗು ಹಾಕುವಿಕೆಯನ್ನು ಬಿಟ್ಟು ಕೊಟ್ಟು ಪುನಃ ಜನಸಂಘದ ನಿಲುವಿಗೆ ಸರಿದಿದೆಂಬುದನ್ನು ತೋರಿಸಿಕೊಟ್ಟಿದೆ. ಅದನ್ನು ಸಂಪೂರ್ಣವಾಗಿ ವಿರೋಧಿಸಬೇಕೆಂಬ ಅರಿವು ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮೂಡಿಬರುವುದು ಅತ್ಯಗತ್ಯ.

ಸಾರ್ವಜನಿಕ ಕ್ಷೇತ್ರದ ಮುಷ್ಕರ

ಜನವರಿ 21ರ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಿದ ಸಾರ್ವಜನಿಕ ಕ್ಷೇತ್ರದ ಕೆಲಸಗಾರರಿಗೂ-ನೌಕರದಾರರಿಗೂ ಸಿ.ಪಿ.ಐ. [ಎಂ] ಪಕ್ಷದ ಪಿ.ಬಿ.ಅಭಿನಂದನೆ ಸಲ್ಲಿಸುತ್ತದೆ. ರಾಜೀವ್ ಗಾಂಧಿಯವರ ಹೊಸ ಆರ್ಥಿಕ ನೀತಿಗನುಸರಿಸಿ ಆಳುವ ಪಕ್ಷದಲ್ಲಿಯ ಪ್ರಭಾವಿ ಮುಖಂಡರು ಸಾರ್ವಜನಿಕ ಕ್ಷೇತ್ರದ ಮೇಲೆ ನಡೆಸಿರುವ ಆಕ್ರಮಣದ ವಿರುದ್ಧ ಹೋರಾಟದಲ್ಲಿ ಜನತೆಗೆ ಅವರು ಮುಖಂಡತ್ವ ನೀಡಿದ್ದಾರೆ. ಸಾರ್ವಜನಿಕ ಕ್ಷೇತ್ರದ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಬೇಕೆಂಬ ಅಪೇಕ್ಷೆಇರುವ ಸಾಮೂಹಿಕ ಸಂಘಟನೆಗಳೂ ರಾಜಕೀಯ ಪಕ್ಷಗಳೂ, ಈ ಒಂದು ದಿವಸದ ಮುಷ್ಕರದ ನಂತರ ಮುಂದಿನ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆಂಬ ಆಶಯವನ್ನು ಪಿ.ಬಿ. ವ್ಯಕ್ತಮಾಡಿದೆ.

ಬಿಜಾಪುರ

ಹಲವು ವರ್ಷಗಳ ನಂತರ ಸಿ. ಐ. ಟಿ. ಯು. ಪ್ರಯತ್ನದಿಂದ ಮೊದಲ ಬಾರಿಗೆ ಬಿಜಾಪುರದಲ್ಲಿ ಸಂಯುಕ್ತವಾದ ಮತಪ್ರದರ್ಶನ ನಡೆಯಿತು. ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಸಾರ್ವಜನಿಕ ಉದ್ದಿಮೆ ಉಳಿಸಿರಿ ಎಂಬ ಕರೆಯ ಮೇರೆಗೆ ಬಿಜಾಪುರದಲ್ಲಿ ಎಲ್ಲಾ ಬ್ಯಾಂಕ್, ಎಲ್. ಐ. ಸಿ. ಮಾತ್ರವಲ್ಲ ನೂಲಿನ ಗಿರಣಿಯ ಕಾರ್ಮಿಕರು ಕೂಡ ತಾ. 21ರಂದು ಮುಷ್ಕರ ಹೂಡಿ ಬೃಹತ್ ಮೆರವಣಿಗೆ ಮಾಡಿದರು.

ಬಾಗಲಕೋಟೆ

ಸಿ. ಐ. ಟಿ. ಯು. ಪ್ರಯತ್ನದಿಂದ ಬಾಗಲಕೋಟೆಯಲ್ಲಿ 9 ಯೂನಿಯನ್‌ಗಳ ಹೋರಾಟ ಸಮಿತಿ ನೇಮಿಸಿ ಅದರ ನೇತೃತ್ವದಲ್ಲಿ ಬ್ಯಾಂಕ್, ಎಲ್. ಐ. ಸಿ. ಕಾರ್ಮಿಕರ ದೊಡ್ಡ ಮತ ಪ್ರದರ್ಶನ ಮೆರವಣಿಗೆ ನಡೆಯಿತು. ಇವರ ಹೋರಾಟಕ್ಕೆ ಬೆಂಬಲಾರ್ಥವಾಗಿ ಸಾಯಂಕಾಲ ಸಿಮೆಂಟ್, ನೂಲಿನ ಗಿರಣಿ, ಪೋಸ್ಟ್, ಕೆ. ಎಸ್. ಆರ್. ಟಿ. ಸಿ. ಮೊದಲಾದ ಕಾರ್ಮಿಕರು ಮೆರವಣಿಗೆ ಮಾಡಿದರು. ಸಿ. ಐ. ಟಿ. ಯು. ಪರವಾಗಿ ನ್ಯೂಟನ್ ಬಿಸಾಯಿ ಹಾಗೂ ಇತರ ಕಾರ್ಮಿಕ ಮುಖಂಡರು ಭಾಷಣ ಮಾಡಿದರು. ○

ರಾಜ್ಯಪಾಲರ ಭಾಷಣ

(1ನೇ ಪುಟದಿಂದ)

ಜಲೆಂಬಿಕ್‌ನಂತ ಕಾರ್ಖಾನೆಗಳು ಕಳೆದ 3-4 ವರ್ಷಗಳಿಂದಲೂ ಮುಚ್ಚಲ್ಪಟ್ಟಿವೆ. ಮೈಸೂರಿನಲ್ಲಿ ಕೆ. ಅರ್. ಮಿಲ್ಸ್, ಹುಬ್ಬಳ್ಳಿ, ರಾಯಚೂರು, ಬಿಜಾಪುರ, ಮೈಸೂರುಗಳಲ್ಲಿ ಹಲವಾರು ಮಧ್ಯಮ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಸಾವಿರಾರು ಕಾರ್ಮಿಕರು ಉಪವಾಸ ಬೀಳುವಂತಾಗಿದೆ. ಬೆಂಗಳೂರನ್ನೊಳಗೊಂಡು ರಾಜ್ಯದ ಹಲವಾರು ಕಡೆ ದೀರ್ಘ ಮುಷ್ಕರ ನಡೆಯುತ್ತಿವೆ. ಕೆಲವು ಕಡೆ ಪೋಲೀಸರ ದಬ್ಬಾಳಿಕೆಯೂ ನಡೆದಿದೆ.

ಹೊಸ ಉದ್ಯಮಗಳೂ ಇಲ್ಲ, ನೀರಾವರಿ ಯೋಜನೆಗಳೂ ಇಲ್ಲ, ಸಮಗ್ರ ಭೂ ಸುಧಾರಣೆಯೂ ಇಲ್ಲ. ಹಾಗಾದರೆ ನಿರುದ್ಯೋಗ ಸಮಸ್ಯೆಗೆ ಪರಿಹಾರ ಎಲ್ಲಿ? ಬಡತನ ದೂರವಾಗುವುದು ಹೇಗೆ? ರಾಜ್ಯಪಾಲರ ಭಾಷಣದಲ್ಲಿ ಅದಕ್ಕೆ ಉತ್ತರವಿಲ್ಲ.

ಎರಡನೆಯದಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಲಾದ "ಸಿ" ಮತ್ತು "ಡಿ" ವರ್ಗದ ಜಮೀನನ್ನು ಭೂಹೀನ ರೈತರಿಗೆ, ಕೃಷಿಕಾರ್ಮಿಕರಿಗೆ ಹಂಚಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಬೇಡಿಕೆ. ಆ ರೀತಿ ರೈತರಿಗೆ ಭೂಮಿ ಒದಗಿಸಿದೆ, ಅಲ್ಲಿ ಮರಗಳನ್ನು ಬೆಳೆಸಲು ಆರ್ಥಿಕ ಸಹಾಯ ನೀಡಲಾಗುವುದಂತೆ. ರೈತರಿಗೆ ಮಾಡುವ ಅತಿ ದೊಡ್ಡ ಅನ್ಯಾಯ ಇದಾಗಿದೆ.

"ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ಅಸ್ತಿತ್ವದಲ್ಲಿ ಬರುವುದರೊಂದಿಗೆ ಯೋಜನಾ ಕಾರ್ಯ ವಿಧಾನ ಹೊಸ ರೂಪ ತಳೆಯಲಿವೆ. ಕೆಳಹಂತದಿಂದಲೇ ಯೋಜನೆಗಳನ್ನು ರೂಪಿಸುವ ಬಗ್ಗೆ ನಾವು ಅನೇಕ ವರ್ಷಗಳಿಂದ ಹೇಳುತ್ತಲೇ ಬಂದಿದ್ದೇವೆ.... ಕರ್ನಾಟಕದಲ್ಲಿ ಇದನ್ನು ನನಸಾಗಿಸುವುದೆಂದು ನಾವು ನಿರೀಕ್ಷಿಸುತ್ತೇವೆ" ಎಂದು ರಾಜ್ಯಪಾಲರು ಹೇಳಿದ್ದಾರೆ. ಈ ಪರಿಕಲ್ಪನೆ ಬಹಳ ಅಪಾಯಕಾರಿ. ಅದು ಅರಾಜಕವಾದವೇ ಸರಿ ಯೋಜನೆ ಯಾವಾಗಲೂ ಮೇಲಿನಿಂದ ಕೆಳಗಿನ ಹಂತದವರೆಗೂ ಎಲ್ಲಾ ಹಂತಗಳಲ್ಲಿ ರೂಪಿಸಲ್ಪಡಬೇಕು. ಅದು ಕೆಳಹಂತಗಳಲ್ಲಿ ಚರ್ಚಿಸಲ್ಪಟ್ಟು, ಅದರ ಆಧಾರದಲ್ಲಿ ಮೇಲ್ಮಟ್ಟದಲ್ಲೇ ಅದರ ಕೊನೆಯ ರೂಪ ರೇಷೆ ನಿರ್ಧರಿಸಲ್ಪಡಬೇಕು.

ಮೂಲಭೂತ ಪ್ರಶ್ನೆಗಳ ಕುರಿತು ರಾಜ್ಯಪಾಲರು ಸರಿಯಾದ ಅಭಿಪ್ರಾಯ ವ್ಯಕ್ತಪಡಿಸಿಲ್ಲ, ಹಾಗೆಯೇ ರಾಜ್ಯದಲ್ಲಿ ಎದ್ದು ಕಾಣುತ್ತಿರುವ ರೈತ-ಕಾರ್ಮಿಕರ ಪ್ರಶ್ನೆ ಭೂಸುಧಾರಣೆ, ಮಧ್ಯಮ-ಸಣ್ಣ ಕೈಗಾರಿಕೆಗಳಸರಿಸ್ಥಿತಿ, ನಿರುದ್ಯೋಗ ಸಮಸ್ಯೆ ಶಿಕ್ಷಣದ ಅಧೋಗತಿ, ಅಭಿವೃದ್ಧಿ ಕಾರ್ಯಗಳ ನಿರ್ಲಕ್ಷಗಳ ಕುರಿತು ಪ್ರಸ್ತಾಪ ಮಾಡಿಲ್ಲ

ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿ ಸಭೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಳಿಯ ಸಭೆ ದಿನಾಂಕ 21 ಮತ್ತು 22-2-87 ರಂದು ಹರಿಹರದಲ್ಲಿ ನಡೆಯುತ್ತದೆ. ರಾಜ್ಯ ಸಮಿತಿಯ ಸಭೆ ಮತ್ತು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಭೆ 20-2-87 ರಂದು ನಡೆಯುತ್ತದೆ. ಸದಸ್ಯರು ಸಂಬಂಧಪಟ್ಟ ಸಭೆಗಳಲ್ಲಿ ಭಾಗವಹಿಸಲು ಸಿದ್ಧರಾಗಬೇಕು.

ಈ ವಾರ....

★ ಜನಾರ್ಧನ ಪೂಜಾರಿ ಅವರು ಸಾಲ ಮೇಳ ನಡೆಸಿದಂತೆ ಪ್ರಧಾನಿ ರಾಜೀವ ಗಾಂಧಿ ಅವರು ದಾನ ಮೇಳ ನಡೆಸುತ್ತಿದ್ದಾರೆಂಬ ಭಾವನೆ ಬರತೊಡಗಿದೆ. ....ಪ್ರಧಾನಿಗಳ ಕೃಪಾ ಕಟಾಕ್ಷಕ್ಕೆ ಒಳಗಾದ ರಾಜ್ಯಗಳು ಕೆಲವೇ ಕೆಲವು. ಈ ರಾಜ್ಯಗಳಲ್ಲಿ ಸದ್ಯವೇ ಚುನಾವಣೆಗಳು ನಡೆಯಲಿವೆ.

"ಪ್ರಜಾವಾಣಿ"

ಯು.ಎನ್'.ಐ. ವಾರ್ತೆ-ಜನವರಿ 28.

★ ಜನವರಿ 21ರ ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರದ ಶಕ್ತಿ ಹಾಗೂ ಹರಹು ಅದರ ಸಂಘಟಕರ ನಿರೀಕ್ಷೆಯನ್ನು ಮೀರಿದೆ. ಎಲ್ಲಾ ದುಡಿಯುವ ಜನರ ಬೆಂಬಲ ಹಾಗೂ ಸೌಹಾರ್ದವನ್ನು ಕೂಡಾ ಅದು ಗಳಿಸಿದೆ.

'ಡೆಕ್ಕನ್ ಹೆರಾಲ್ಡ್' ನಲ್ಲಿ ಒಂದು ಲೇಖನ

★ ಅಮೇರಿಕಾದ ಡಾಲರ್ ಬೆಲೆ ಸಾಮಾನ್ಯ ಸ್ಥಿತಿಯ ಮಟ್ಟಕ್ಕಿಂತ ಕೆಳಗೆ ಕುಸಿದಿರುವುದರಿಂದ ಭಾರತದ ರಿಝರ್ವ್ ಬ್ಯಾಂಕ್ ರೂಪಾಯಿಯ ಅಪಮೌಲ್ಯ ಮಾಡಬೇಕಾಗಿ ಬಂದಿದೆ. ಇದರಿಂದಾಗಿ ಇಂದು ಬ್ರಿಟನ್ನಿನ ಒಂದು ಪೌಂಡಿಗೆ ಭಾರತದ 20 ರೂ. ಸಮ ಇದು ಇದುವರೆಗಿನ ಅತ್ಯಂತ ಕನಿಷ್ಟ ಮೌಲ್ಯ.

ಯು. ಎನ್. ಐ. ವಾರ್ತೆ – ಜನವರಿ 23

★ ಐ.ಎಂ.ಎಫ್. ಧೋರಣೆಗಳಿಂದಾಗಿ ದೇಶೀ ಕೈಗಾರಿಕೆಗಳು ನಾಶವಾಗಿವೆ. ನಾಣ್ಯಗಳು ಅಪಮೌಲ್ಯಗೊಂಡಿವೆ, ಹಣದುಬ್ಬರ ಹಾಗೂ ಸಾಮಾಜಿಕ ಬಿಕ್ಕಟ್ಟು ಉಂಟಾಗಿದೆ. ಮೂರನೇ ಜಗತ್ತಿನ ದೇಶಗಳ ಬಡತನಕ್ಕೆ ದಾರಿಮಾಡಿಕೊಡುವ ಐ.ಎಂ. ಎಫ್. ನ ಸಾಮ್ರಾಜ್ಯಶಾಹಿ-ಪರ ಸಿದ್ಧಾಂತಗಳನ್ನು ಬದಲಿಸಲು ಲ್ಯಾಟಿನ್ ಅಮೇರಿಕಾದಲ್ಲಿ ಒಂದು ಐಕ್ಯ ಆಂದೋಲನ ನಡೆಸಬೇಕು.

–ನವದೆಹಲಿಯಲ್ಲಿ ಪೆರುವಿನ ಅಧ್ಯಕ್ಷ ಅಲನ್ ಗಾರ್ಸಿಯಾ

★ ಭಾರತದ ವಿದೇಶಾಂಗ ಧೋರಣೆಯನ್ನು ರೂಪಿಸುವ ಹಾಗೂ ನಿರ್ವಹಿಸುವ ಪ್ರಕ್ರಿಯೆಗಳನ್ನು ವ್ಯವಸ್ಥಿತವಾಗಿ ನಾಶಗೊಳಿಸಬೇಕೆಂದು ಶ್ರೀ ರಾಜೀವ್‌ಗಾಂಧಿ ಬಯಸಿದ್ದರೆ ಆ ಕೆಲಸವನ್ನು ಜನವರಿ 20ರ ಪತ್ರಿಕಾ ಸಮ್ಮೇಳನದಲ್ಲಿ ಮಾಡಿದುದಕ್ಕಿಂತ ಉತ್ತಮ ರೀತಿಯಲ್ಲಿ ಮಾಡಲು ಸಾಧ್ಯವಾಗದು. ಶ್ರೀ. ಎ.ಪಿ. ವೆಂಕಟೇಶ್ವರನ್ ಸ್ಥಾನದಲ್ಲಿ "ಹೊಸ ವಿದೇಶಾಂಗ ಕಾರ್ಯದರ್ಶಿ" ಬರುವರೆಂದ ಅವರ ನಿರ್ಲಕ್ಷ ಹೇಳಿಕೆ ಒಬ್ಬ ಪ್ರಧಾನ ಮಂತ್ರಿಗೆ ಶೋಭಿಸುವಂತದ್ದಲ್ಲ.

ಟೈಂಸ್ ಅಫ್ ಇಂಡಿಯಾ.

Printed & Published by P. Ramachandra Rao on behalf of the Communist Party of India [Marxist] Karnataka State Committee.
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331
Editor P. Ramachandra Rao
Managing Editor : N. K. Upadhyaya